# www.karunaduexams.com

## ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನ ಕ್ವಿಜ್

## ಮಾರ್ಚ್ 2017

www.karunaduexams.com

1. ದೇಶದ ಮೊದಲ ಅಂತ್ಯೋದಯ ಎಕ್ಸಪ್ರೆಸ್ ರೈಲಿಗೆ ಕೇಂದ್ರ ರೈಲ್ವೆ ಸಚಿವಾಲಯ ಚಾಲನೆ ನೀಡಿದೆ. ಅಂದಹಾಗೆ ಈ ರೈಲು ಯಾವ ಎರಡು ನಗರಗಳ ನಡುವೆ ಸಂಚರಿಸಲಿದೆ?

ಅ) ನವದೆಹಲಿ-ಕೊಲ್ಕತ್ತ

ಆ) ಮುಂಬೈ-ನವದೆಹಲಿ

ಇ) ಎರ್ನಾಕುಲಂ-ಹೌರ

ಈ) ಕೊಚ್ಚಿ-ಗೋವಾ

ಎರ್ನಾಕುಲಂ-ಹೌರ

ದೇಶದ ಮೊದಲ ಅಂತ್ಯೋದಯ ಎಕ್ಸಪ್ರೆಸ್ ರೈಲಿಗೆ ಕೇಂದ್ರ ರೈಲ್ವೆ ಸಚಿವ ಸುರೇಶ್ ಪ್ರಭು ಅವರು ಚಾಲನೆ ನೀಡಿದರು. ಈ ರೈಲು ಎರ್ನಾಕುಲಂ ಮತ್ತು ಹೌರ ನಡುವೆ ಸಂಚರಿಸಲಿದೆ. ಟಿಕೆಟ್ ರಿಸರ್ವೆಷನ್ ಮಾಡಿಸಿಕೊಳ್ಳದ ಪ್ರಯಾಣಿಕರಿಗಾಗಿ ಪ್ರಯಾಣಿಕರ ದಟ್ಟಣೆಯ ಮಾರ್ಗಗಳಲ್ಲಿ ಅಂತ್ಯೋದಯ ಎಕ್ಸ್ ಪ್ರೆಸ್ ರೈಲುಗಳನ್ನು ಭಾರತೀಯ ರೈಲ್ವೆ ಅನಾವರಣಗೊಳಿಸಿದೆ. ದೀನದಯಾಳು ಬೋಗಿಗಳನ್ನು ಹೋಲುವ ಅಂತ್ಯೋದಯ ಎಕ್ಸಪ್ರೆಸ್ ರೈಲುಗಾಡಿಗಳ ಕಿಟಕಿಗಳಲ್ಲಿ ಕೆಂಪು ಮತ್ತು ಹಳದಿ ಬಣ್ಣ ಹಾಗೂ ವಿಶಿಷ್ಠ ವಿನ್ಯಾಸ, ಸಾಮಾನ್ಯ ಸ್ಲೀಪರ್ ಬೋಗಿಗಳಿಗಿಂತ ಹೆಚ್ಚಿನ ನೀರು ಶುದ್ದೀಕರಣ ವ್ಯವಸ್ಥೆ, ಸೂಚನಾ ಫಲಕಗಳು, ಜೈವಿಕ ಶೌಚಗೃಹಗಳು, ಆಗ್ನಿಶಾಮಕಗಳು, ಕಳ್ಳತನ ನಿರೋಧಿ ವ್ಯವಸ್ಥೆ ಇತ್ಯಾದಿ ಆಧುನಿಕ ಸವಲತ್ತುಗಳಿವೆ.

2. ಖ್ಯಾತ ಅಂಕಣಕಾರ, ನಾಟಕಕಾರ "ತಾರಕ್ ಮೆಹ್ತಾ" ಇತ್ತೀಚೆಗೆ ನಿಧನರಾದರು. ಇವರು ಯಾವ ರಾಜ್ಯಕ್ಕೆ ಸಂಬಂಧಿಸಿದ್ದಾರೆ?

ಅ) ಕೇರಳ

ಆ) ಗುಜರಾತ್

ಇ) ರಾಜಸ್ತಾನ

ಈ) ಮಧ್ಯ ಪ್ರದೇಶ

ಗುಜರಾತ್

ಭಾರತದ ಖ್ಯಾತ ಅಂಕಣಕಾರ, ಹಾಸ್ಯ ಲೇಖಕ ಹಾಗೂ ನಾಟಕಕಾರ ತಾರಕ್ ಮೆಹ್ತಾ ಅವರು ಬುಧವಾರ ನಿಧನರಾಗಿದ್ದಾರೆ. ತಮ್ಮ ಹಾಸ್ಯ ಲೇಖನ ಮತ್ತು ವಿಡಂಬನಾತ್ಮಕ ಅಂಕಣಗಳಿಂದ ಖ್ಯಾತಿ ಗಳಿಸಿದ್ದ ತಾರಕ್ ಮೆಹ್ತಾ ಅವರು ಗುಜರಾತ್ ಭಾಷೆಯಲ್ಲಿ ಬರೆದಿದ್ದ ಅಂಕಣವನ್ನು ಆಧರಿಸಿ 2008ರಲ್ಲಿ ಸಬ್ ಟಿವಿಯಲ್ಲಿ 'ತಾರಕ್ ಮೆಹ್ತಾ ಕಾ ಉಲ್ಟಾ ಚಷ್ಮಾ' ಎಂಬ ಕಾರ್ಯಕ್ರಮ ಪ್ರಸಾರವಾಗಿತ್ತು. ಈ ಕಾರ್ಯಕ್ರಮದಿಂದಾಗಿ ಚಾನಲ್‌ಗೆ ಭಾರೀ ಖ್ಯಾತಿ ಗಳಿಸಿತ್ತು. ಸಾಮಾನ್ಯ ಸಾಮಾಜಿಕ ಬೆಳವಣಿಗೆಗಳು ಹಾಗೂ ಜನಜೀವನದಲ್ಲಿನ ಸಣ್ಣ ಬದಲಾವಣೆಗಳನ್ನು ತಮ್ಮ ಹಾಸ್ಯ ಬರವಣಿಗೆ ಮೂಲಕ ತಾರಕ್ ಮೆಹ್ತಾ ವಿಡಂಬನೆ ಮಾಡುತ್ತಿದ್ದರು. 2015ರಲ್ಲಿ ತಾರಕ್ ಮೆಹ್ತಾ ಅವರಿಗೆ ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಅಪಾರ ಸೇವೆಗಾಗಿ ಪದ್ಮಶ್ರೀ ಪ್ರಶಸ್ತಿ ಕೂಡ ನೀಡಿ ಗೌರವಿಸಲಾಗಿತ್ತು.

www.karunaduexams.com

3. "The Wrong Turn: Love and Betrayal in the Time of Netaji" ಪುಸ್ತಕದ ಲೇಖಕರು ಯಾರು?

ಅ) ಪೂನಂ ಸಿಂಗ್

ಆ) ನಮಿತ ರಾಯ್ ಘೋಷ್

ಇ) ಅರವಿಂದ್ ಬೋಸ್

ಈ) ನರೇಂದ್ರ ಜ್ಯೋದ್

ನಮಿತ ರಾಯ್ ಘೋಷ್

4. 2017 ರಾಷ್ಟ್ರೀಯ ವಿಜ್ಞಾನ ದಿನದ ಧ್ಯೇಯವಾಕ್ಯ __________?

ಅ) Science for Sustainable Future

ಆ) Science and Technology for Specially Abled Persons

ಇ) Science for Digital India

ಈ) Fostering Scientific Temper

Science and Technology for Specially Abled Persons

ಭಾರತದಲ್ಲಿ ಪ್ರತಿ ವರ್ಷ ಫೆಬ್ರುವರಿ 28 ರಂದು ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಗುತ್ತದೆ. ಭಾರತದ ಖ್ಯಾತ ವಿಜ್ಞಾನಿ ಸರ್ ಸಿ.ವಿ.ರಾಮನ್ ಅವರು ರಾಮನ್ ಎಫೆಕ್ಟ್ ಅನ್ವೇಷಿಸಿದ ದಿನವನ್ನು ವಿಜ್ಞಾನ ದಿನವೆಂದು ಆಚರಿಸಲಾಗುವುದು. Science and Technology for Specially Abled Persons ಇದು ಈ ವರ್ಷದ ಥೀಮ್.

5. ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗದ ನೂತನ ಅಧ್ಯಕ್ಷರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಜಗನ್ನಾಥ್ ಕಾಳೆ

ಆ) ರಮೇಶ್ ಸಿಂಪಿಗಿ

ಇ) ನಂದ್ ಕುಮಾರ್ ಸಾಯ್

ಈ) ಚರಣ್ ಬಾಟಿಯಾ

ನಂದ್ ಕುಮಾರ್ ಸಾಯ್

ಹಿರಿಯ ಬುಡಕಟ್ಟು ಜನಾಂಗದ ನಾಯಕ ಹಾಗೂ ಮಾಜಿ ಸಂಸದ ನಂದ್ ಕುಮಾರ್ ಸಾಯ್ ರವರು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗದ ನೂತನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

6. ಈ ಕೆಳಗಿನ ಯಾರನ್ನು "ESPNcricinfo 2017ನೇ ವರ್ಷದ ನಾಯಕ (Captain of the year)" ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ?

ಅ) ಡು ಫ್ಲೆಸಿ

ಆ) ವಿರಾಟ್ ಕೊಹ್ಲಿ

ಇ) ಸ್ಟೀವೆನ್ ಸ್ಮಿತ್

ಈ) ಬೆನ್ ಸ್ಟೋಕ್ಸ್

ವಿರಾಟ್ ಕೊಹ್ಲಿ

www.karunaduexams.com

ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಅವರಿಗೆ ESPNcricinfo 2017ನೇ ವರ್ಷದ ನಾಯಕ (Captain of the year)" ಪ್ರಶಸ್ತಿ ನೀಡಲಾಗಿದೆ. ಕಳೆದ ವರ್ಷ ಆಡಿದ ಟೆಸ್ಟ್ ಪಂದ್ಯಗಳಲ್ಲಿ 12 ಪಂದ್ಯ ಪೈಕಿ 9 ಪಂದ್ಯಗಳನ್ನು ಕೊಹ್ಲಿ ತಂಡ ಗೆದ್ದುಕೊಂಡಿದೆ.

7. 2017 ಅಂತಾರಾಷ್ಟ್ರೀಯ ಯೋಗ ಉತ್ಸವ ಯಾವ ರಾಜ್ಯದಲ್ಲಿ ಆರಂಭಗೊಂಡಿದೆ?
   ಅ) ಉತ್ತರಖಂಡ್
   ಆ) ಪಶ್ಚಿಮ ಬಂಗಾಳ
   ಇ) ತಮಿಳು ನಾಡು
   ಈ) ಗುಜರಾತ್
   ಉತ್ತರಖಂಡ್
   29ನೇ ಅಂತಾರಾಷ್ಟ್ರೀಯ ಯೋಗ ಉತ್ಸವ ಉತ್ತರಖಂಡದ ಪರ್ಮಥ್ ನಿಕೇತನದಲ್ಲಿ ಆರಂಭಗೊಂಡಿತು.

8. ಈ ಕೆಳಗಿನ ಯಾರು "ಸಾರ್ಕ್"ನ ನೂತನ ಜನರಲ್ ಸೆಕ್ರೆಟರಿ ಆಗಿ ನೇಮಕಗೊಂಡಿದ್ದಾರೆ?
   ಅ) ಅಹ್ಮದ್ ಸಲೀಂ
   ಆ) ಮಹಮ್ಮದ್ ಜಾವೇದ್
   ಇ) ಅಮ್ಜದ್ ಹುಸೇನ್ ಬಿ ಸಿಯಾಲ್
   ಈ) ಶಫಿಕುದ್ದೀನ್
   ಅಮ್ಜದ್ ಹುಸೇನ್ ಬಿ ಸಿಯಾಲ್
   ಪಾಕಿಸ್ತಾನದ ಹಿರಿಯ ರಾಜತಾಂತ್ರಿಕ ಅಮ್ಜದ್ ಹುಸೇನ್ ಬಿ ಸಿಯಾಲ್ ಸಾರ್ಕ್"ನ ನೂತನ ಜನರಲ್ ಸೆಕ್ರೆಟರಿ ಆಗಿ ನೇಮಕಗೊಂಡಿದ್ದಾರೆ. ನೇಪಾಳದ ಅರ್ಜುನ್ ಬಹುದ್ದೂರ್ ಥಾಪ ಅವರ ಉತ್ತರಾಧಿಕಾರಿಯಾಗಿ ಇವರು ಕಾರ್ಯನಿರ್ವಹಿಸಲಿದ್ದಾರೆ.

9. ಭಾರತೀಯ ಷೇರು ವಿನಿಮಯ ಮಂಡಳಿ (ಸೆಬಿ)ಯ ನೂತನ ಅಧ್ಯಕ್ಷರು ಯಾರು?
   ಅ) ಅಜಯ್ ತ್ಯಾಗಿ
   ಆ) ಸುರೇಂದ್ರ ಕಾರ್ಣಿಕ್
   ಇ) ಜಿತೇಂದ್ರ ಷಾ
   ಈ) ಅರವಿಂದ್ ಜೋಷಿ
   ಅಜಯ್ ತ್ಯಾಗಿ

10. "ಇಸ್ರೋ ಟೆಲಿಮೆಟ್ರಿ ಟ್ರಾಕಿಂಗ್ ಅಂಡ್ ಕಮಾಂಡ್ ನೆಟ್ವರ್ಕ್ "ISRO Telemetry Tracking and Command Network (ISTRAC)" ಎಲ್ಲಿದೆ?
   ಅ) ಬೆಂಗಳೂರು

www.karunaduexams.com

ಆ) ಅಂಡಮಾನ್ ಅಂಡ್ ನಿಕೋಬರ್

ಇ) ಲಕ್ಷದ್ವೀಪ

ಈ) ಚೆನ್ನೈ

ಅಂಡಮಾನ್ ಅಂಡ್ ನಿಕೋಬರ್

11. ಈ ಕೆಳಗಿನ ಯಾರಿಗೆ 2017 ಹಾರ್ವರ್ಡ್ ವರ್ಷದ ಮಾನವೀಯ ಪ್ರಶಸ್ತಿ ಲಭಿಸಿದೆ?

ಅ) ಬರಾಕ್ ಒಬಾಮ

ಆ) ಎಲ್ ಕೆ ಅಡ್ವಾಣಿ

ಇ) ರಾಬಿನ್ ರಿಹಾನ್ನಾ ಫೆಂಟಿ

ಈ) ಪೋಪ್ ಫ್ರಾನ್ಸಿಸ್

ರಾಬಿನ್ ರಿಹಾನ್ನಾ ಫೆಂಟಿ

ಬರ್ಬೋಡದ ಪ್ರಸಿದ್ಧ ಗಾಯಕ ಹಾಗೂ ಗೀತ ರಚನೆಗಾರಿ ರಾಬಿನ್ ರಿಹಾನ್ನಾ ಫೆಂಟಿ ಅವರಿಗೆ 2017 ಹಾರ್ವರ್ಡ್ ವರ್ಷದ ಮಾನವೀಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಫೆಂಟಿ ಅವರು ತಮ್ಮ ಸ್ವದೇಶದಲ್ಲಿ ಕ್ಯಾನ್ಸರ್ ಚಿಕಿತ್ಸೆಯನ್ನು ಉತ್ತಮಪಡಿಸಲು ನೀಡಿರುವ ಕೊಡುಗೆ ಹಾಗೂ ಕ್ಯಾರೆಬಿಯನ್ ವಿದ್ಯಾರ್ಥಿಗಳು ಅಮೆರಿಕದಲ್ಲಿ ವ್ಯಾಸಂಗ ಮಾಡಲು ವಿದ್ಯಾರ್ಥಿ ವೇತನವನ್ನು ಆರಂಭಿಸಿರುವುದನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

12. ವಿಶ್ವ ವ್ಯಾಪಾರ ಸಂಸ್ಥೆ (WTO)ದ ಭಾರತದ ಖಾಯಂ ಪ್ರತಿನಿಧಿಯಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಜೆ ಎಸ್ ದೀಪಕ್

ಆ) ಅರುಣ್ ಜೈನ್

ಇ) ಕುಶಾಲ್ ಭಾರದ್ವಜ್

ಈ) ಸುಧೀಂದ್ರ ಚೆಂಗಪ್ಪ

ಜೆ ಎಸ್ ದೀಪಕ್

ದೂರಸಂಪರ್ಕ ಕಾರ್ಯದರ್ಶಿ ಜೆ ಎಸ್ ದೀಪಕ್ ಅವರು ವಿಶ್ವ ವ್ಯಾಪಾರ ಸಂಸ್ಥೆ (WTO)ದ ಭಾರತದ ಖಾಯಂ ಪ್ರತಿನಿಧಿಯಾಗಿ ನೇಮಕಗೊಂಡಿದ್ದಾರೆ. ಜೂನ್ 1, 2017 ರಿಂದ ಅಧಿಕೃತವಾಗಿ ಅಧಿಕಾರವನ್ನು ಸ್ವೀಕಾರ ಮಾಡಲಿದ್ದಾರೆ.

13. 2017 ಮಹಿಳಾ ವಿಶ್ವ ಚೆಸ್ ಚಾಂಪಿಯನ್ ಷಿಪ್ ನಲ್ಲಿ ಕಂಚಿನ ಪದಕ ಗೆದ್ದ ಭಾರತದ ಚೆಸ್ ಆಟಗಾರ್ತಿ ಯಾರು?

ಅ) ಪದ್ಮನಿ ರೌವತ್

ಆ) ಎಸ್ ವಿಜಯಲಕ್ಷ್ಮೀ

ಇ) ಹರಿಕಾ ದ್ರೋಣವಳ್ಳಿ

ಈ) ಕೊನೆರು ಹಂಪಿ

www.karunaduexams.com

ಹರಿಕಾ ದ್ರೋಣವಳ್ಳಿ

ಭಾರತದ ಚೆಸ್ ಆಟಗಾರ್ತಿ ಹರಿಕಾ ದ್ರೋಣವಳ್ಳಿ ಅವರು 2017 ಮಹಿಳಾ ವಿಶ್ವ ಚೆಸ್ ಚಾಂಪಿಯನ್ ನಲ್ಲಿ ಕಂಚಿನ ಪದಕವನ್ನು ಗೆದ್ದುಕೊಂಡರು. ದ್ರೋಣವಳ್ಳಿ ಅವರಿಗೆ ಇದು ವಿಶ್ವ ಚೆಸ್ ಚಾಂಪಿಯನ್ ನಲ್ಲಿ ಮೂರನೇ ಕಂಚಿನ ಪದಕವಾಗಿದೆ.

14. ಈ ಕೆಳಗಿನ ಯಾರು ರಿಪಬ್ಲಿಕ್ ಆಫ್ ಸೂಡಾನ್ ನ ನೂತನ ಪ್ರಧಾನಿಯಾಗಿ ನೇಮಕಗೊಂಡಿದ್ದಾರೆ?

ಅ) ಮಹಮ್ಮದ್ ಯೂನಿಸ್ ಖಾನ್

ಆ) ಸೈಯದ್ ಶೇಕ್ ಅಬ್ದುಲ್ಲಾ

ಇ) ಬಕ್ರಿ ಹಸ್ಸನ್ ಸಲೆಹ್

ಈ) ಮಹಮ್ಮದ್ ಅಹ್ಮದ್

ಬಕ್ರಿ ಹಸ್ಸನ್ ಸಲೆಹ್

ಸೂಡಾನ್ ನ ರಾಷ್ಟ್ರಾಧ್ಯಕ್ಷರಾದ ಒಮರ್ ಅಲ್ ಬಷೀರ್ ಅವರು ಬಕ್ರಿ ಹಸ್ಸನ್ ಸಲೆಹ್ ಅವರನ್ನು ಸೂಡಾನ್ ನ ನೂತನ ಪ್ರಧಾನಿಯಾಗಿ ನೇಮಕಮಾಡಿದ್ದಾರೆ. 1989 ರಿಂದ ಪ್ರಧಾನಿ ಹುದ್ದೆಯನ್ನು ರದ್ದುಗೊಳಿಸಲಾಗಿತ್ತು. ಪ್ರಧಾನಿ ಹುದ್ದೆಯನ್ನು ಮರು ಸೃಷ್ಟಿಸಲಾಗಿದ್ದು, ಸೀಮಿತ ಅಧಿಕಾರವನ್ನು ಮಾತ್ರ ನೀಡಲಾಗಿದ್ದು, ರಾಷ್ಟ್ರಪತಿ ಅವರು ಹೆಚ್ಚಿನ ಅಧಿಕಾರವನ್ನು ಉಳಿಸಿಕೊಂಡಿದ್ದಾರೆ.

15. "2017 ಶೂನ್ಯ ತಾರತಮ್ಯ ದಿನ (2017 Zero Discrimination Day (ZDD)"ದ ಧ್ಯೇಯವಾಕ್ಯ ___________?

ಅ) Make Some Noise for Zero Discrimination

ಆ) No Discrimination

ಇ) Stand Out to Fight for Discrimination

ಈ) Sure No Discrimination

Make Some Noise for Zero Discrimination

"2017 ಶೂನ್ಯ ತಾರತಮ್ಯ ದಿನ (2017 Zero Discrimination Day (ZDD)"ವನ್ನು ಪ್ರತಿ ವರ್ಷ ಮಾರ್ಚ್ 1 ರಂದು ಆಚರಿಸಲಾಗುತ್ತದೆ. ಈ ವರ್ಷದ ಧ್ಯೇಯವಾಕ್ಯ Make Some Noise for Zero Discrimination.

16. ಭಾರತದಲ್ಲಿ ಯಾವ ದಿನದಂದು "ಸಿವಿಲ್ ಅಕೌಂಟ್ಸ್ ದಿನ (Civil Accounts Day)"ವನ್ನು ಆಚರಿಸಲಾಗುತ್ತದೆ?

ಅ) ಮಾರ್ಚ್ 1

ಆ) ಮಾರ್ಚ್ 2

ಇ) ಫೆಬ್ರುವರಿ 28

ಈ) ಫೆಬ್ರುವರಿ 27

ಮಾರ್ಚ್ 1

www.karunaduexams.com

ಪ್ರತಿ ವರ್ಷ ಮಾರ್ಚ್ 1 ರಂದು ಸಿವಿಲ್ ಅಕೌಂಟ್ಸ್ ದಿನವನ್ನು ದೇಶದಲ್ಲಿ ಆಚರಿಸಲಾಗುತ್ತದೆ. ಇಂಡಿಯನ್ ಸಿವಿಲ್ ಅಕೌಂಟ್ಸ್ ಸೇವೆಯನ್ನು ಮಾರ್ಚ್ 1, 1976ರಲ್ಲಿ ಸ್ಥಾಪಿಸಲಾದ ಸ್ಮರಣಾರ್ಥ ಮಾರ್ಚ್ 1 ರಂದು ಈ ದಿನವನ್ನು ಆಚರಿಸಲಾಗುತ್ತಿದೆ.

17. ವಿಸಿಟರ್ಸ್ ಆವಾರ್ಡ್ 2017 ಅತ್ಯುತ್ತಮ ವಿಶ್ವವಿದ್ಯಾಲಯ ಗೌರವಕ್ಕೆ ಪಾತ್ರವಾದ ವಿಶ್ವವಿದ್ಯಾಲಯ ಯಾವುದು?

ಅ) ಬನರಸ ಹಿಂದು ವಿಶ್ವವಿದ್ಯಾಲಯ

ಆ) ಜವಾಹರ್ ಲಾಲ್ ನೆಹರು ವಿಶ್ವವಿದ್ಯಾಲಯ

ಇ) ಬೆಂಗಳೂರು ವಿಶ್ವವಿದ್ಯಾಲಯ

ಈ) ತೇಜ್ಪುರ ವಿಶ್ವವಿದ್ಯಾಲಯ

ಜವಾಹರ್ ಲಾಲ್ ನೆಹರು ವಿಶ್ವವಿದ್ಯಾಲಯ

18. ಯಾವ ಸಮಿತಿ ಇತ್ತೀಚೆಗೆ ವಲಸಿಗರ ಹಿತಾಸಕ್ತಿ ಸಂಬಂಧಿಸಿದಂತೆ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿತು?

ಅ) ಪಾರ್ಥ ಮುಖೋಪದಾಯ್ ಸಮಿತಿ

ಆ) ಚಿರಂಜೀವಿ ಸಿಂಗ್ ಸಮಿತಿ

ಇ) ಮನೀಷ್ ತಿವಾರಿ ಸಮಿತಿ

ಈ) ಸುರೇಶ್ ಮೊಟ್ವಾನಿ ಸಮಿತಿ

ಪಾರ್ಥ ಮುಖೋಪದಾಯ್ ಸಮಿತಿ

ಪಾರ್ಥ ಮುಖೋಪದಾಯ್ ಸಮಿತಿ ನೇತೃತ್ವದ ವಲಸಿಗರಿಗೆ ಸಂಬಂಧಿಸಿದಂತೆ ಕಾರ್ಯಪಡೆ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಈ ಸಮಿತಿಯನ್ನು ಕೇಂದ್ರ ವಸತಿ ಮತ್ತು ನಗರ ಬಡತನ ನಿವಾರಣಾ ಸಚಿವಾಲಯ 2015ರಲ್ಲಿ ರಚಿಸಿತ್ತು.

19. "Mr and Mrs Jinnah: The Marriage that Shook India" ಪುಸ್ತಕದ ಲೇಖಕರು________?

ಅ) ಶೀಲಾ ರೆಡ್ಡಿ

ಆ) ಶೋಭಾ ಡೆ

ಇ) ಶಶಿ ತರೂರು

ಈ) ಮದನ್ ಭಾಟಿಯ

ಶೀಲಾ ರೆಡ್ಡಿ

ಖ್ಯಾತ ಪತ್ರಕರ್ತೆ ಶೀಲಾ ರೆಡ್ಡಿ "Mr and Mrs Jinnah: The Marriage that Shook India" ಪುಸ್ತಕದ ಲೇಖಕರು. ಪುಸ್ತಕದಲ್ಲಿ ಜಿನ್ನಾ ಹಾಗೂ ಅವರ ಮದುವೆಯ ಅವಧಿ ಇತಿಹಾಸದ ಬಗ್ಗೆ ಬಣ್ಣಿಸಲಾಗಿದೆ.

20. ಯಾವ ರಾಜ್ಯ 8ನೇ ತರಗತಿ ವರೆಗೆ ಸಂಸ್ಕತಿಯನ್ನು ಕಡ್ಡಾಯಗೊಳಿಸಿದೆ?



www.karunaduexams.com

ಅ) ಅಸ್ಸಾಂ

ಆ) ತಮಿಳುನಾಡು

ಇ) ಅರುಣಾಚಲ ಪ್ರದೇಶ

ಈ) ಜಾರ್ಖಂಡ್

ಅಸ್ಸಾಂ

ಅಸ್ಸಾಂ ಸರ್ಕಾರ ರಾಜ್ಯದ 8ನೇ ತರಗತಿ ವರೆಗೆ ಸಂಸ್ಕೃತಿ ಕಲಿಕೆಯನ್ನು ಕಡ್ಡಾಯಗೊಳಿಸಿದೆ. ಅಲ್ಲದೇ ಸ್ವಚ್ಛ ಭಾರತ ಅಭಿಯಾನದಡಿ ಶಾಲೆಗಳಲ್ಲಿ ನೈರ್ಮಲ್ಯತೆಯನ್ನು ಕಾಪಾಡುವ ಸಲುವಾಗಿ ಹೊಸದಾಗಿ ಹುದ್ದೆಗಳನ್ನು ಸೃಜನೆಮಾಡಿದೆ.

21. ವಿಶ್ವ ವನ್ಯಜೀವಿ ದಿನವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಮಾರ್ಚ್ 1

ಆ) ಮಾರ್ಚ್ 2

ಇ) ಮಾರ್ಚ್ 3

ಈ) ಮಾರ್ಚ್ 4

ಮಾರ್ಚ್ 3

ವಿಶ್ವ ವನ್ಯಜೀವಿ ದಿನ (World Wildlife Day)ವನ್ನು ಪ್ರತಿ ವರ್ಷ ಮಾರ್ಚ್ 4 ರಂದು ಆಚರಿಸಲಾಗುವುದು. "ಸೈಟ್ಸ್ (CITES)" ಒಪ್ಪಂದಕ್ಕೆ ಸಹಿ ಹಾಕಿದ ಈ ದಿನವನ್ನು ವಿಶ್ವ ವನ್ಯಜೀವಿ ದಿನವೆಂದು ಆಚರಿಸಲಾಗುತ್ತಿದೆ. "ಯುವಜನತೆಗೆ ಕಿವಿಕೊಡಿ" ಇದು ಈ ವರ್ಷದ ವನ್ಯಜೀವಿ ದಿನದ ಧ್ಯೇಯವಾಕ್ಯ.

22. ವಿಶ್ವದ ಶ್ರೇಷ್ಠ ಪುಟ್ಬಾಲ್ ಆಟಗಾರ "ರೇಮಂಡ್ ಕೊಪ" ಇತ್ತೀಚೆಗೆ ನಿಧನರಾದರು. ಅಂದಹಾಗೆ ಕೊಪ ಯಾವ ದೇಶಕ್ಕೆ ಸಂಬಂಧಿಸಿದ್ದಾರೆ?

ಅ) ಫ್ರಾನ್ಸ್

ಆ) ಇಟಲಿ

ಇ) ಮೆಕ್ಸಿಕೊ

ಈ) ಬ್ರೆಜಿಲ್

ಫ್ರಾನ್ಸ್

ಫ್ರಾನ್ಸ್ ನ ಪುಟ್ಬಾಲ್ ಕ್ರೀಡೆಯ ದಂತಕತೆ ಎನಿಸಿದ್ದ "ರೇಮಂಡ್ ಕೊಪ" ರವರು ನಿಧನರಾದರು. ಕೊಪ ಅವರು ಸರ್ವಕಾಲೀಕ ಶ್ರೇಷ್ಠ ಮಿಡ್ ಫೀಲ್ಡರ್ ಆಟಗಾರನಾಗಿ ಜನಪ್ರಿಯರಾಗಿದ್ದರು.

23. "ಮಹಾನಗರ ಟೆಲಿಫೋನ್ ನಿಗಮ ಲಿಮಿಟೆಡ್ (MTNL)"ನ ನೂತನ ಮುಖ್ಯಸ್ಥರು ಹಾಗೂ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಯಾರು ನೇಮಕಗೊಂಡಿದ್ದಾರೆ?

ಅ) ಸುಭಾಷ್ ಚಂದ್ರ

ಆ) ವಿಜಯ ಪ್ರಕಾಶ್

www.karunaduexams.com

ಇ) ಪಿ ಕೆ ಪುರ್ವರ್

ಈ) ಪ್ರತಾಪ್ ಸಿಂಗ್

ಪಿ ಕೆ ಪುರ್ವರ್

ಪಿ ಕೆ ಪುರ್ವರ್ ಅವರು "ಮಹಾನಗರ ಟೆಲಿಫೋನ್ ನಿಗಮ ಲಿಮಿಟೆಡ್ (MTNL)"ನ ನೂತನ ಮುಖ್ಯಸ್ಥರು ಹಾಗೂ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ನೇಮಕಗೊಂಡಿದ್ದಾರೆ. ಈ ಹಿಂದೆ ಪುರ್ವರ್ ಅವರು ಎಂಟಿಎನ್‌ಎಲ್ ನ ಹಣಕಾಸು ವಿಭಾಗದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು.

24. ರಾಷ್ಟ್ರ ವ್ಯಾಪ್ತಿಯ "ಸ್ವಚ್ಚ ಶಕ್ತಿ ಸಪ್ತಾಹ"ಕ್ಕೆ ಯಾವ ನಗರದಲ್ಲಿ ಚಾಲನೆ ನೀಡಲಾಯಿತು?

ಅ) ಗುರುಗ್ರಾಮ

ಆ) ಪುಣೆ

ಇ) ಭೂಪಾಲ್

ಈ) ಅಹಮದಬಾದ್

ಹರಿಯಾಣದ ಗುರುಗ್ರಾಮದಲ್ಲಿ ರಾಷ್ಟ್ರವ್ಯಾಪ್ತಿಯ "ಸ್ವಚ್ಚ ಶಕ್ತಿ ಸಪ್ತಾಹ"ಕ್ಕೆ ಕೇಂದ್ರ ಗ್ರಾಮೀಣಭಿವೃದ್ದಿ ಮತ್ತು ಪಂಚಾಯತ್ ರಾಜ್ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ಚಾಲನೆ ನೀಡಿದರು. ನೈರ್ಮಲ್ಯ ಹಾಗೂ ಸ್ವಚ್ಚತೆ ಬಗ್ಗೆ ಅರಿವು ಮೂಡಿಸುವುದು ಈ ಸಪ್ತಾಹದ ಉದ್ದೇಶ. ಸ್ವಚ್ಚ ಶಕ್ತಿ ಸಪ್ತಾಹ ವನ್ನು ಮಾರ್ಚ್ 1 ರಿಂದ ಮಾರ್ಚ್ 8, 2017 ರವರೆಗೆ ಆಚರಿಸಲಾಗುವುದು.

25. "2017 ಹಿಂದೂ ಮಹಾಸಾಗರ ದಂಡೆಯ ರಾಷ್ಟ್ರಗಳ ಒಕ್ಕೂಟ (Indian Ocean Rim Association)" ಶೃಂಗಸಭೆಯನ್ನು ಯಾವ ರಾಷ್ಟ್ರದಲ್ಲಿ ಆಯೋಜಿಸಲಾಗುವುದು?

ಅ) ಇಂಡೋನೇಷಿಯಾ

ಆ) ಶ್ರೀಲಂಕಾ

ಇ) ಭಾರತ

ಈ) ತಾಂಜಾನಿಯ

ಇಂಡೋನೇಷಿಯಾ

2017 ಹಿಂದೂ ಮಹಾಸಾಗರ ದಂಡೆಯ ರಾಷ್ಟ್ರಗಳ ಒಕ್ಕೂಟ (Indian Ocean Rim Association)" ಶೃಂಗಸಭೆ ಇಂಡೋನೇಷಿಯಾದ ಜಕಾರ್ತದಲ್ಲಿ ಮಾರ್ಚ್ 7 ರಿಂದ ನಡೆಯಲಿದೆ. ಸಾಗರೋತ್ತರ ಸಹಕಾರ ಹಾಗೂ ಭಯೋತ್ಪಾದನೆ ಕುರಿತು ಶೃಂಗಸಭೆಯಲ್ಲಿ ಚರ್ಚಿಸಲಾಗುವುದು. "ಹಿಂದೂ ಮಹಾಸಾಗರ ದಂಡೆಯ ರಾಷ್ಟ್ರಗಳ ಒಕ್ಕೂಟ (Indian Ocean Rim Association)"ದ 21 ರಾಷ್ಟ್ರಗಳು ಹಾಗೂ ಏಳು ವೀಕ್ಷಣಾ ರಾಷ್ಟ್ರಗಳು ಶೃಂಗಸಭೆಯಲ್ಲಿ ಭಾಗವಹಿಸಲಿವೆ.

www.karunaduexams.com

26. "When Crime Pays - Money and Muscle in Indian Politics" ಪುಸ್ತಕದ ಲೇಖಕರು _____-?

ಅ) ಪಂಕಜ್ ಮಿಶ್ರಾ

ಆ) ಅಮಿತಾಬ್ ಕಾಂತ್

ಇ) ರಾಜೇಂದ್ರ ಸಿಂಗ್

ಈ) ಮಿಲನ್ ವೈಷ್ಣವ್

ಮಿಲನ್ ವೈಷ್ಣವ್

"When Crime Pays - Money and Muscle in Indian Politics" ಪುಸ್ತಕವನ್ನು ಮಿಲನ್ ವೈಷ್ಣವ್ ಬರೆದಿದ್ದಾರೆ. ಭಾರತೀಯ ರಾಜಕೀಯತೆಯಲ್ಲಿರುವ ಭ್ರಷ್ಟಾಚಾರ ಹಾಗೂ ಅಪರಾಧಿತನದ ಬಗ್ಗೆ ಪುಸ್ತಕದಲ್ಲಿ ವಿಶ್ಲೇಷಿಸಲಾಗಿದೆ.

27. ಪ್ರಸಿದ್ದ ಬುಡಕಟ್ಟು ಉತ್ಸವ "ಭಗೊರಿಯ (Bhagoria)" ಯಾವ ರಾಜ್ಯದಲ್ಲಿ ಆರಂಭಗೊಂಡಿದೆ?

ಅ) ಮಧ್ಯ ಪ್ರದೇಶ

ಆ) ಮಣಿಪುರ

ಇ) ತ್ರಿಪುರ

ಈ) ಜಾರ್ಖಂಡ್

ಮಧ್ಯ ಪ್ರದೇಶ

ವಾರ್ಷಿಕ ಬುಡಕಟ್ಟು ಉತ್ಸವ "ಭಗೋರಿಯ" ಮಧ್ಯಪ್ರದೇಶದ ಜಾಬೊವ ಹಾಗೂ ಇತರೆ ನಾಲ್ಕು ಜಿಲ್ಲೆಗಳಲ್ಲಿ ಆರಂಭಗೊಂಡಿತು.

28. 13ನೇ "ಆರ್ಥಿಕ ಸಹಕಾರ ಒಕ್ಕೂಟ (Economic Co-operation Association)"ದ ಶೃಂಗಸಭೆ ಯಾವ ದೇಶದಲ್ಲಿ ನಡೆಯಿತು?

ಅ) ಭಾರತ

ಆ) ಪಾಕಿಸ್ತಾನ

ಇ) ತಜಕಿಸ್ತಾನ

ಈ) ಉಜ್ಬೇಕಿಸ್ತಾನ

ಪಾಕಿಸ್ತಾನ

13ನೇ "ಆರ್ಥಿಕ ಸಹಕಾರ ಒಕ್ಕೂಟ (Economic Co-operation Association)" ಶೃಂಗಸಭೆ ಪಾಕಿಸ್ತಾನದ ಇಸ್ಲಮಾಬಾದ್ ನಲ್ಲಿ ಮಾರ್ಚ್ 1 ರಂದು ನಡೆಯಿತು. ವ್ಯಾಪಾರ, ಇಂಧನ, ಪ್ರವಾಸೋದ್ಯಮ, ಆರ್ಥಿಕ ಬೆಳವಣಿಗೆ ಸಂಬಂಧಿಸಿದಂತೆ ಪರಸ್ಪರ ಸಹಕಾರ ಸಾಧಿಸುವುದು ಶೃಂಗಸಭೆಯ ಧ್ಯೇಯ. ಟರ್ಕಿಯ ಹಲಿಲ್ ಇಬ್ರಾಹಿಂ ಅಕಾ ಅವರು ಈ ಒಕ್ಕೂಟದ ಪ್ರಸ್ತುತ ಸೆಕ್ರೆಟರಿ ಜನರಲ್ ಆಗಿದ್ದಾರೆ.

www.karunaduexams.com

29. ಇತ್ತೀಚೆಗೆ ನಿಧನರಾದ "ರೆನೆ ಪ್ರೆವಲ್" ಅವರು ಯಾವ ದೇಶದ ಮಾಜಿ ಅಧ್ಯಕ್ಷರು?

ಅ) ಹೈಟಿ

ಆ) ಇಸ್ರೇಲ್

ಇ) ಜಪಾನ್

ಈ) ಫಿಲಿಫೈನ್ಸ್

ಹೈಟಿ

ಹೈಟಿಯ ಮಾಜಿ ಅಧ್ಯಕ್ಷ "ರೆನೆ ಗಾರ್ಸಿಯಾ ಪ್ರೆವಲ್" ಅವರು ನಿಧನರಾದರು. ಬಡವರ ಬಂಧು ಎಂದೇ ಖ್ಯಾತರಾಗಿದ್ದ ಅವರು ಎರಡು ಬಾರಿಯ ಹೈಟಿಯ ಅಧ್ಯಕ್ಷ ಹುದ್ದೆಯನ್ನು ಅಲಂಕರಿಸಿದ್ದರು.

30. ಯಾವ ರಾಜ್ಯ ಇತ್ತೀಚೆಗೆ ಅಳಿವಿನಂಚಿನಲ್ಲಿರುವ "ಕುರುಖ್" ಭಾಷೆಗೆ ಅಧಿಕೃತ ಭಾಷೆ ಸ್ಥಾನಮಾನವನ್ನು ನೀಡಿತು?

ಅ) ಪಶ್ಚಿಮ ಬಂಗಾಳ

ಆ) ಆಂಧ್ರ ಪ್ರದೇಶ

ಇ) ತೆಲಂಗಣ

ಈ) ಒಡಿಶಾ

ಪಶ್ಚಿಮ ಬಂಗಾಳ

31. 'ಜಲ ಕ್ರಾಂತಿ ಅಭಿಯಾನ'ದ ರಾಷ್ಟ್ರೀಯ ಸಮ್ಮೇಳನ ಯಾವ ನಗರದಲ್ಲಿ ಆಯೋಜಿಸಲಾಗಿತ್ತು?

ಅ) ದೆಹಲಿ

ಆ) ವಾರಣಾಸಿ

ಇ) ಭೋಪಾಲ್

ಈ) ಅಲಹಾಬಾದ್

ದೆಹಲಿ

'ಜಲ ಕ್ರಾಂತಿ ಅಭಿಯಾನ'ದ ರಾಷ್ಟ್ರೀಯ ಸಮ್ಮೇಳನ ದೆಹಲಿಯಲ್ಲಿ ಆಯೋಜನೆಗೊಂಡಿತ್ತು. ಈ ಸಮ್ಮೇಳನದಲ್ಲಿ ರೈತರು, ಪಂಚಾಯಿತಿ ಸದಸ್ಯರು, ಸರ್ಕಾರೇತರ ಸಂಸ್ಥೆಗಳು ಮತ್ತು ಶಾಲಾ-ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಜಲಾನಯನ ಬಳಕೆ ಮತ್ತು ನಿರ್ವಹಣೆಯನ್ನು ತಳಮಟ್ಟದಿಂದಲೇ ಬಲಿಷ್ಠಗೊಳಿಸುವ ಉದ್ದೇಶದಿಂದ ಈ ಸಮ್ಮೇಳನದಲ್ಲಿ ಪಂಚಾಯತ್ ರಾಜ್ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿತ್ತು.

32. ಭಾರತದ ನಗರ ವ್ಯವಸ್ಥೆಯ ವಾರ್ಷಿಕ ಸಮೀಕ್ಷೆ-2016 ರ ನಗರ ಸರ್ಕಾರ ಶ್ರೇಣಿಯಲ್ಲಿ ಪ್ರಥಮ ಸ್ಥಾನವನ್ನು ಪಡೆದ ನಗರ ಯಾವುದು?

www.karunaduexams.com

ಅ) ಬೆಂಗಳೂರು

ಆ) ಕೋಲ್ಕತ್ತ

ಇ) ಪುಣೆ

ಈ) ತಿರುವನಾಂತಪುರಂ

ತಿರುವನಾಂತಪುರಂ

ಜನಾಗ್ರಹ ಸಂಸ್ಥೆ ಕೈಗೊಂಡ ಭಾರತದ ನಗರ ವ್ಯವಸ್ಥೆಯ ವಾರ್ಷಿಕ ಸಮೀಕ್ಷೆ-2016 ರ ನಾಲ್ಕನೇ ಆವೃತ್ತಿಯ ನಗರ ಸರ್ಕಾರ ಶ್ರೇಣಿಯಲ್ಲಿ ಕೇರಳದ ತಿರುವನಾಂತಪುರಂ ಪ್ರಥಮ ಸ್ಥಾನವನ್ನು ಪಡೆದಿದೆ. ದೇಶದ 18 ರಾಜ್ಯಗಳ 21 ನಗರಗಳಲ್ಲಿ ಸಮೀಕ್ಷೆ ನಡೆಸಲಾಯಿತು. ಈ ಸಮೀಕ್ಷೆಯಂತೆ ಪುಣೆ 2ನೇ ಸ್ಥಾನದಲ್ಲಿ, ಕೋಲ್ಕತ್ತ, ಮುಂಬೈ ಮತ್ತು ಹೈದರಾಬಾದ್ ನಂತರದ ಸ್ಥಾನಗಳನ್ನು ಪಡೆದಿದೆ. ಸಾರ್ವಜನಿಕ ಸೇವೆ ನೀಡುವಲ್ಲಿ ಎದುರಾಗಬಹುದಾದಂತ ಎಡರು-ತೊಡರುಗಳನ್ನು ಈ ಸಮೀಕ್ಷೆ ಉಲ್ಲೇಖಿಸಿದೆ ಜೊತೆಗೆ ಸ್ಥಳೀಯ ಸರ್ಕಾರಗಳು ಕೈಗೊಳ್ಳಬಹುದಾದ ಬದಲಾವಣೆಗಳನ್ನು ಸಹ ಈ ಸಮೀಕ್ಷೆಯಲ್ಲಿ ನೀಡಿದೆ.

33. ಭಾರತೀಯ ರಾಷ್ಟ್ರೀಯ ಕ್ರಿಕೆಟ್ ತಂಡದ ಅಧಿಕೃತ ಪ್ರಯೋಜಕತ್ವವನ್ನು ಯಾವ ಕಂಪನಿ ವಹಿಸಿಕೊಂಡಿದೆ?

ಅ) ಒಪ್ಪೋ

ಆ) ವಿವೋ

ಇ) ರಿಲಯನ್ಸ್

ಈ) ಮೈಕ್ರೋಮ್ಯಾಕ್ಸ್

ಒಪ್ಪೋ

ಮೊಬೈಲ್ ಉತ್ಪಾದಕ ಕಂಪನಿ ಒಪ್ಪೋ ಮೊಬೈಲ್ ಇಂಡಿಯಾ ಪ್ರೈ.ಲಿ. ಭಾರತೀಯ ರಾಷ್ಟ್ರೀಯ ಕ್ರಿಕೆಟ್ ತಂಡದ ಅಧಿಕೃತ ಪ್ರಯೋಜಕತ್ವವನ್ನು ಮುಂದಿನ 5 ವರ್ಷಗಳಿಗೆ ಒಪ್ಪಂದ ಮಾಡಿಕೊಂಡಿದೆ. ಇದರನ್ವಯ ಪ್ರಯೋಜಕರ ಲಾಂಛನವನ್ನು ಪುರುಷ ಮತ್ತು ಮಹಿಳಾ ಕ್ರಿಕೆಟ್ ತಂಡದ ಕಿಟ್ ಗಳಲ್ಲಿ ಅಳವಡಿಸಲಾಗುವುದು.)

34. "ಇಂಟರ್ ನ್ಯಾಷನಲ್ ಕಾನ್ಫರೆನ್ಸ್ ಆನ್ ಇ-ಗವರ್ನೆನ್ಸ್" 2017 ನ್ನು ಈ ಕೆಳಕಂಡ ಯಾವ ನಗರದಲ್ಲಿ ಅಯೋಜಿಸಲಾಗಿತ್ತು?

ಅ) ಬೆಂಗಳೂರು

ಆ) ದೆಹಲಿ

ಇ) ಮುಂಬೈ

ಈ) ಚೆನ್ನೈ

ದೆಹಲಿ

www.karnaduexams.com

35. ಈ ಕೆಳಕಂಡ ಹೇಳಿಕೆಗಳನ್ನು ಗಮನಿಸಿ:

I. ಭಾರತ ಮತ್ತು ಒಮನ್ ದೇಶಗಳ ಜಂಟಿ ಮಿಲಿಟರಿ ಸಮರಾಭ್ಯಾಸ ' ಅಲ್ ನಗಾಹ್-II ' ಒಮನ್ ನಲ್ಲಿ ನಡೆಯಿತು

II. ಭಾರತ ಮತ್ತು ನೇಪಾಳ ದೇಶಗಳ ಜಂಟಿ ಮಿಲಿಟರಿ ಸಮರಾಭ್ಯಾಸ 'ಸೂರ್ಯ ಕಿರಣ್-XI' ಉತ್ತರಾಖಂಡದಲ್ಲಿ ನಡೆಯಿತು

ಉತ್ತರಗಳು:

ಅ) ಹೇಳಿಕೆ I ಸರಿಯಾಗಿದೆ

ಆ) ಹೇಳಿಕೆ II ಸರಿಯಾಗಿದೆ

ಇ) ಹೇಳಿಕೆ I ಮತ್ತು II ಸರಿಯಾಗಿದೆ

ಈ) ಹೇಳಿಕೆ I ಮತ್ತು II ತಪ್ಪಾಗಿದೆ

ಹೇಳಿಕೆ I ಮತ್ತು II ಸರಿಯಾಗಿದೆ

ಭಾರತ ಮತ್ತು ಒಮನ್ ದೇಶಗಳ ಜಂಟಿ ಮಿಲಿಟರಿ ಸಮರಾಭ್ಯಾಸ ' ಅಲ್ ನಗಾಹ್-II ' ಒಮನ್ ನಲ್ಲಿ ನಡೆಯಿತು. ಭಾರತ ಮತ್ತು ನೇಪಾಳ ದೇಶಗಳ ಜಂಟಿ ಮಿಲಿಟರಿ ಸಮರಾಭ್ಯಾಸ 'ಸೂರ್ಯ ಕಿರಣ್-XI' ಉತ್ತರಾಖಂಡದಲ್ಲಿ ನಡೆಯಿತು

36. ಟೈಮ್ಸ್ ಹೈಯರ್ ಎಜುಕೇಷನ್ 2017 ರ "ವಿಶ್ವದ ಅತ್ಯುತ್ತಮ ಚಿಕ್ಕ ವಿಶ್ವವಿದ್ಯಾಲಯ" ಪಟ್ಟಿಯಲ್ಲಿ ಹತ್ತರೊಳಗಿನ ಸ್ಥಾನ ಪಡೆದ ವಿಶ್ವವಿದ್ಯಾಲಯ ಯಾವುದು?

ಅ) ಇಂಡಿಯನ್ ಇನ್ಸ್ ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು

ಆ) ಇಂಡಿಯನ್ ಇನ್ಸ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಗೌಹಾಟಿ

ಇ) ಸಾವಿತ್ರಿ ಬಾಯಿ ಫೂಲೆ ಪುಣೆ ವಿಶ್ವವಿದ್ಯಾಲಯ

ಈ) ಇಂಡಿಯನ್ ಇನ್ಸ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬಾಂಬೆ

ಇಂಡಿಯನ್ ಇನ್ಸ್ ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು

ಇಂಡಿಯನ್ ಇನ್ಸ್ ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು ವಿಶ್ವವಿದ್ಯಾಲಯವು ಟೈಮ್ಸ್ ಹೈಯರ್ ಎಜುಕೇಷನ್ 2017 ರ "ವಿಶ್ವದ ಅತ್ಯುತ್ತಮ ಚಿಕ್ಕ ವಿಶ್ವವಿದ್ಯಾಲಯ" ಟಾಪ್ 10 ರ ಪಟ್ಟಿಯಲ್ಲಿ 8ನೇ ಸ್ಥಾನವನ್ನು ಪಡೆದಿದೆ. ಕ್ಯಾಲಿಫೋರ್ನಿಯ ಇನ್ಸ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಪಟ್ಟಿಯಲ್ಲಿ ಅಗ್ರ ಸ್ಥಾನವನ್ನು ಪಡೆದಿದೆ. 5000 ಕ್ಕಿಂತ ಕಡಿಮೆ ವಿದ್ಯಾರ್ಥಿಗಳನ್ನು ಹೊಂದಿರುವ ವಿಶ್ವವಿದ್ಯಾಲಯಗಳನ್ನು ಈ ಸಮೀಕ್ಷೆಯಲ್ಲಿ ಗಣನೆಗೆ ತೆಗೆದುಕೊಂಡಿತ್ತು.

www.karunaduexams.com

37. ಹಿರಿಯ ನಾಗರಿಕರಿಗಾಗಿ "ತೀರ್ಥ ದರ್ಶನ" ಎಂಬ ಯೋಜನೆಯನ್ನು ಯಾವ ರಾಜ್ಯ ಸರ್ಕಾರ ಪ್ರಾರಂಭಿಸಿದೆ?

ಅ) ಉತ್ತರಪ್ರದೇಶ

ಆ) ಉತ್ತರಾಖಂಡ

ಇ) ರಾಜಸ್ಥಾನ

ಈ) ಹರಿಯಾಣ

ಹರಿಯಾಣ

ತನ್ನ ರಾಜ್ಯದ ಹಿರಿಯ ನಾಗರಿಕರಿಗಾಗಿ "ತೀರ್ಥ ದರ್ಶನ" ಎಂಬ ಯೋಜನೆಯನ್ನು ಹರಿಯಾಣ ರಾಜ್ಯ ಸರ್ಕಾರ ಪ್ರಾರಂಭಿಸಿದೆ. ಈ ಯೋಜನೆಯಡಿ 60 ವರ್ಷ ಮೇಲ್ಪಟ್ಟ ನಾಗರಿಕರಿಗೆ ತೀರ್ಥಯಾತ್ರೆ ಕೈಗೊಳ್ಳಲು ರಾಜ್ಯ ಸರ್ಕಾರ ವೆಚ್ಚ ಭರಿಸಲಿದೆ. ಬಿ ಪಿ ಎಲ್ ಕುಟುಂಬದವರು ಈ ಯೋಜನೆಯಡಿ ಫಲಾನುಭವಿಯಾಗಲು ಅರ್ಹರಾಗಿರುತ್ತಾರೆ. ದೇಶದ ಸುಮಾರು 400 ತೀರ್ಥ ಕ್ಷೇತ್ರಗಳ ದರ್ಶನವನ್ನು ಮಾಡಲು ಸರ್ಕಾರ ಲಾಟರಿ ಮೂಲಕ ಆಯ್ಕೆಗೊಳಿಸಲಾಗುತ್ತದೆ.

38. ಗ್ರಾಹಕ ಸೇವೆಗಾಗಿ ಕೃತಕ ಬುದ್ದಿಮತ್ತೆ ಆಧಾರಿತ ಬ್ಯಾಕಿಂಗ್ (Artificial Intelligence) ವ್ಯವಸ್ಥೆ "ಎಲೆಕ್ಟ್ರಾನಿಕ್ ವರ್ಚುಯಲ್ ಅಸಿಸ್ಟಂಟ್" (EVA) ನ್ನು ಯಾವ ಬ್ಯಾಂಕ್ ಪ್ರಾರಂಭಿಸಿದೆ?

ಅ) ಭಾರತೀಯ ಸ್ಟೇಟ್ ಬ್ಯಾಂಕ್

ಆ) ಹೆಚ್.ಡಿ.ಎಫ್.ಸಿ. ಬ್ಯಾಂಕ್

ಇ) ಸಿಟಿ ಬ್ಯಾಂಕ್

ಈ) ಕೆನರಾ ಬ್ಯಾಂಕ್

ಹೆಚ್.ಡಿ.ಎಫ್.ಸಿ ಬ್ಯಾಂಕ್

ಗ್ರಾಹಕ ಸೇವೆಗಾಗಿ ಕೃತಕ ಬುದ್ದಿಮತ್ತೆ ಆಧಾರಿತ ಬ್ಯಾಕಿಂಗ್ (Artificial Intelligence) ವ್ಯವಸ್ಥೆ "ಎಲೆಕ್ಟ್ರಾನಿಕ್ ವರ್ಚುಯಲ್ ಅಸಿಸ್ಟಂಟ್" (EVA) ನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್ ಪ್ರಾರಂಭಿಸಿದೆ. EVA ಏಕಕಾಲದಲ್ಲಿ ಮಿಲಿಯನ್ ಗ್ರಾಹಕ ಪ್ರಶ್ನೆಗಳಿಗೆ 0.4 ಸೆಕೆಂಡ್ ಗಳಲ್ಲಿ ಉತ್ತರಿಸಲಿದೆ. EVA ಸಾವಿರಾರು ಮೂಲಗಳಿಂದ ಬುದ್ದಿಮತ್ತೆ ಪಡೆದಿದ್ದು ಗ್ರಾಹಕರಿಗೆ ಸರಳ ಭಾಷೆಯಲ್ಲಿ ಉತ್ತರಿಸಲಿದೆ.

39. "Numbers Do Lie: 61 Hidden Cricket Stories" ಪುಸ್ತಕದ ಲೇಖಕರು _______?

ಅ) ಗೌತಮ್ ಗಂಭೀರ್

ಆ) ಆಕಾಶ್ ಚೋಪ್ರ

ಇ) ಸುನೀಲ್ ಗವಾಸ್ಕರ್

ಈ) ವಿರೇಂದ್ರ ಸೆಹ್ವಾಗ್

ಆಕಾಶ್ ಚೋಪ್ರ

www.karunadueexams.com

ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಆಕಾಶ್ ಚೋಪ್ರ ಅವರು "Numbers Do Lie: 61 Hidden Cricket Stories" ಪುಸ್ತಕವನ್ನು ಬರೆದಿದ್ದಾರೆ.

40. 2017 ಮೆಕ್ಸಿಕೋ ಓಪನ್ ಟೆನ್ನಿಸ್ ಟೂರ್ನಮೆಂಟ್ ನಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡವರು ಯಾರು?

ಅ) ರೋಜರ್ ಫೆಡರರ್

ಆ) ರಫೆಲ್ ನಡಾಲ್

ಇ) ಸ್ಯಾಮ್ ಕ್ವೆರ್ರಿ

ಈ) ನೊವಾಕ್ ಜೊಕೊವಿಕ್

ಸ್ಯಾಮ್ ಕ್ವೆರ್ರಿ

ಅಮೆರಿಕದ ವೃತ್ತಿಪರ ಟೆನ್ನಿಸ್ ಆಟಗಾರ್ ಸ್ಯಾಮ್ ಕ್ವೆರ್ರಿ ಅವರು ರಫೆಲ್ ನಡಾಲ್ ಅವರನ್ನು 6-3, 7-6 ಸೆಟ್ ಗಳಿಂದ ಸೋಲಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

41. ಈ ಕೆಳಗಿನ ಯಾರಿಗೆ "2016 ಮೂರ್ತಿ ದೇವಿ" ಪ್ರಶಸ್ತಿ ಲಭಿಸಿದೆ?

ಅ) ಎಂ ಪಿ ವಿರೇಂದ್ರ ಕುಮಾರ್

ಆ) ವೀರಪ್ಪ ಮೊಹ್ಲಿ

ಇ) ಅನುಪಮಾ

ಈ) ಚೇತನ್ ಭಗತ್

ಎಂ ಪಿ ವಿರೇಂದ್ರ ಕುಮಾರ್

ಮಲಯಾಳಂನ ಪ್ರಖ್ಯಾತ ಸಾಹಿತಿ ಹಾಗೂ ಪತ್ರಕರ್ತ ಎಂ ಪಿ ವಿರೇಂದ್ರ ಕುಮಾರ್ ಅವರಿಗೆ 2016 ಮೂರ್ತಿ ದೇವಿ ಪ್ರಶಸ್ತಿಯನ್ನು ನೀಡಲಾಗಿದೆ. ವಿರೇಂದ್ರ ಕುಮಾರ್ ಅವರ ಪ್ರವಾಸಿಕಥನ "ಹಿಮಾವತಭೂವಿಲ್"ಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ.

42. "2017 ಅಂತಾರಾಷ್ಟ್ರೀಯ ಮಹಿಳಾ ದಿನ"ದ ಧ್ಯೇಯವಾಕ್ಯ _________?

ಅ) Women in the Changing World of Work: Planet 50-50 by 2030

ಆ) Women Is Power Respect Her

ಇ) Women Now Everywhere

ಈ) Respect Every Women

Women in the Changing World of Work: Planet 50-50 by 2030

ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಪ್ರತಿ ವರ್ಷ ಮಾರ್ಚ್ 8 ರಂದು ಆಚರಿಸಲಾಗುತ್ತದೆ. Women in the Changing World of Work: Planet 50-50 by 2030 ಇದು ಈ ವರ್ಷದ ಥೀಮ್.

www.karunaduexams.com

43. ಇತ್ತೀಚೆಗೆ ನಿಧನರಾದ ಕಾಳಿಕಾ ಪ್ರಸಾದ್ ಭಟ್ಟಾಚಾರ್ಯ ಯಾವ ಭಾಷೆಯ ಪ್ರಸಿದ್ಧ ಜಾನಪದ ಗಾಯಕ?

ಅ) ಬಂಗಾಳಿ

ಆ) ತೆಲುಗು

ಇ) ಮರಾಠಿ

ಈ) ತಮಿಳು

ಬಂಗಾಳಿ

ಬಂಗಾಳಿ ಭಾಷೆಯ ಪ್ರಸಿದ್ಧ ಜಾನಪದ ಗಾಯಕ ಕಾಳಿಕಾ ಪ್ರಸಾದ್ ಭಟ್ಟಾಚಾರ್ಯ ಅವರು ನಿಧನರಾದರು. ಪಶ್ಚಿಮ ಬಂಗಾಳದ ಗ್ರಾಮೀಣ ಪ್ರದೇಶಗಳಲ್ಲಿ ಜಾನಪದ ಸಂಗೀತಾ ಪ್ರಸಿದ್ಧವಾಗಲು ಭಟ್ಟಾಚಾರ್ಯ ಅವರು ಅಪಾರ ಕೊಡುಗೆ ನೀಡಿದ್ದರು.

44. "ದಿ ಸಿಕ್ರೇಟ್ ಡೈರಿ ಆಫ್ ಕಸ್ತೂರಬಾ (The Secret Dairy of Kasturaba)" ಪುಸ್ತಕದ ಲೇಖಕರು ಯಾರು?

ಅ) ಮನ್ವೀರ್ ಸಿಂಗ್

ಆ) ಮೃಣನಿ ಪ್ರಸಾದ್

ಇ) ನೀಲಿಮಾ ಪ್ರಸಾದ್ ಅಧರ್

ಈ) ಕೀರ್ತಿ ವಾಜಪೇಯಿ

ನೀಲಿಮಾ ಪ್ರಸಾದ್ ಅಧರ್

45. ಭಾರತದ ಅತಿ ದೊಡ್ಡ ಕೇಬಲ್ ಆಧರಿತ ಸೇತುವೆಯನ್ನು ಈ ಕೆಳಗಿನ ಯಾವ ನದಿಯ ಮೇಲೆ ನಿರ್ಮಿಸಲಾಗಿದೆ?

ಅ) ನರ್ಮದಾ

ಆ) ತಪತಿ

ಇ) ಕೃಷ್ಣಾ

ಈ) ಗೋದಾವರಿ

ನರ್ಮದಾ

ನರ್ಮದಾ ನದಿಯ ಮೇಲೆ ನಿರ್ಮಿಸಲಾಗಿರುವ ದೇಶದ ಅತಿ ದೊಡ್ಡ ಕೇಬಲ್ ಆಧರಿತ ಸೇವೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಿದರು. ಲಾರ್ಸನ್ & ಟರ್ಬೋ ಈ ಸೇತುವೆಯನ್ನು ನಿರ್ಮಿಸಿದೆ.

46. 11ನೇ "ಈಶಾನ್ಯ ಉದ್ದಿಮೆ ಶೃಂಗಸಭೆ (North East Business Summit)" ಯಾವ ನಗರದಲ್ಲಿ ನಡೆಯಿತು?

ಅ) ಇಂಫಾಲ್

ಆ) ಗುವಾಹಟಿ

ಇ) ಶಿಲ್ಲಾಂಗ್

ಈ) ನವ ದೆಹಲಿ

ನವ ದೆಹಲಿ

www.karunaduexams.com

11ನೇ ಈಶಾನ್ಯ ಉದ್ದಿಮೆ ಶೃಂಗಸಭೆ ನವದೆಹಲಿಯಲ್ಲಿ ನಡೆಯತಿ. ಈಶಾನ್ಯ ಭಾಗದಲ್ಲಿ ಬಂಡವಾಳ ಹೂಡಲು ಇರುವ ಅವಕಾಶ ಹಾಗೂ ಹೂಡಿಕೆಯನ್ನು ಪ್ರೋತ್ಸಾಹಿಸುವುದು ಶೃಂಗಸಭೆಯ ಧ್ಯೇಯ.

47. ಈ ಕೆಳಗಿನ ಯಾವ ದೇಶದಲ್ಲಿ "India by the Nile" ಸಾಂಸ್ಕೃತಿಕ ಉತ್ಸವ ಆರಂಭಗೊಂಡಿತು?

ಅ) ಮಾರಿಷಸ್

ಆ) ಆಸ್ಟ್ರೇಲಿಯಾ

ಇ) ಈಜಿಪ್ಟ್

ಈ) ನೈಜೀರಿಯಾ

ಈಜಿಪ್ಟ್

"ಇಂಡಿಯಾ ಬೈ ದಿ ನೈಲ್" ಮೆಗಾ ಸಾಂಸ್ಕೃತಿಕ ಉತ್ಸವ ಈಜಿಪ್ಟ್ ನ ಕೈರೊದಲ್ಲಿ ಆರಂಭಗೊಂಡಿತು. ಮಾರ್ಚ್ 8 ರಿಂದ 14 ರವರೆಗೆ ಈ ಉತ್ಸವ ಜರುಗಲಿದೆ. ಈ ವರ್ಷ ಭಾರತದ ಇತಿಹಾಸದಲ್ಲಿ ಸ್ಮರಣೀಯವಾಗಿದ್ದು 70ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಿಕೊಳ್ಳುತ್ತಿದೆ ಅಲ್ಲದೇ ಭಾರತ ಮತ್ತು ಈಜಿಪ್ಟ್ ನಡುವಿನ ದ್ವಿಪಕ್ಷೀಯ ಸಹಕಾರಕ್ಕೆ 70 ವರ್ಷ ತುಂಬಲಿದೆ.

48. ಮಹಿಳಾ ನೇಕಾರರಿಗೆ ಹಾಗೂ ಮಹಿಳಾ ಕರಕುಶಲಕರ್ಮಿಗಳಿಗಾಗಿ "ಕಮಲದೇವಿ ಚಟ್ಟೋಪಾಧ್ಯಯ ರಾಷ್ಟ್ರೀಯ ಪ್ರಶಸ್ತಿ"ಯನ್ನುಯಾವ ಸಚಿವಾಲಯ ಸ್ಥಾಪಿಸಿದೆ?

ಅ) ಗ್ರಾಮೀಣಭಿವೃದ್ದಿ ಸಚಿವಾಲಯ

ಆ) ಜವಳಿ ಸಚಿವಾಲಯ

ಇ) ಪಂಚಾಯತ್ ರಾಜ್ ಸಚಿವಾಲಯ

ಈ) ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಸಚಿವಾಲಯ

ಜವಳಿ ಸಚಿವಾಲಯ

ಕೇಂದ್ರ ಜವಳಿ ಸಚಿವೆ ಸೃತಿ ಇರಾನಿ ಅವರು ಮಹಿಳಾ ನೇಕಾರರಿಗೆ ಹಾಗೂ ಮಹಿಳಾ ಕರಕುಶಲಕರ್ಮಿಗಳಿಗಾಗಿ "ಕಮಲದೇವಿ ಚಟ್ಟೋಪಾಧ್ಯಯ ರಾಷ್ಟ್ರೀಯ ಪ್ರಶಸ್ತಿ"ಯನ್ನು ಇತ್ತೀಚೆಗೆ ಸ್ಥಾಪಿಸಿದ್ದಾರೆ. ಇದರ ಜೊತೆಗೆ ಮಹಿಳಾ ನೇಕಾರರು ಮತ್ತು ಮಹಿಳಾ ಕರಕುಶಲಕರ್ಮಿಗಳಿಗೆ ಮುದ್ರಾ ಯೋಜನೆಯಡಿ ಸಾಲ ವಿತರಿಸಲು "ಮಹಿಳಾ ವಿಕಾಸ್ ಮಹಿಳಾ ಕೆ ಸಾಥ್" ಅಭಿಯಾನವನ್ನು ಸಹ ಆರಂಭಿಸಲಾಯಿತು.

49. ಸಾರ್ವಜನಿಕ ವಲಯದ ಯಾವ ಬ್ಯಾಂಕ್ ಇತ್ತೀಚೆಗೆ ತನ್ನ ನೌಕರರಿಗೆ "ವರ್ಕ್ ಫ್ರಮ್ ಹೋಮ್ (Work from Home)" ಅವಕಾಶವನ್ನು ಜಾರಿಗೆ ತಂದಿದೆ?

ಅ) ಭಾರತೀಯ ಸ್ಟೇಟ್ ಬ್ಯಾಂಕ್

ಆ) ಕೆನರಾ ಬ್ಯಾಂಕ್

ಇ) ಸಿಂಡಿಕೇಟ್ ಬ್ಯಾಂಕ್

ಈ) ವಿಜಯಾ ಬ್ಯಾಂಕ್

ಭಾರತೀಯ ಸ್ಟೇಟ್ ಬ್ಯಾಂಕ್

ಭಾರತೀಯ ಸ್ಟೇಟ್ ಬ್ಯಾಂಕ್ ತನ್ನ ನೌಕರರಿಗೆ ತುರ್ತು ಸಂದರ್ಭದಲ್ಲಿ ಮೊಬೈಲ್ ಬಳಸಿ ಮನೆಯಿಂದಲೇ ಕೆಲಸ ಮಾಡುವ ಅವಕಾಶವನ್ನು ಕಲ್ಪಿಸಿದೆ.

50. "ಇಂಟರ್ನ್ಯಾಷನಲ್ ಫಿಲ್ಮ್ ಫೆಸ್ಟಿವಲ್ ಅಂಡ್ ಆವಾರ್ಡ್ಸ್ ಆಫ್ ಆಸ್ಟ್ರೇಲಿಯಾ (IFFAA)" ದಲ್ಲಿ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದ ಭಾರತೀಯ ನಟಿ ಯಾರು?

ಅ) ಸೋನಾಕ್ಷಿ ಸಿನ್ಹಾ

ಆ) ಮಾಧುರಿ ದೀಕ್ಷಿತ್

ಇ) ಐಶ್ವರ್ಯಾ ರೈ ಬಚ್ಚನ್

ಈ) ದೀಪಿಕಾ ಪಡುಕೋಣೆ

ಐಶ್ವರ್ಯಾ ರೈ ಬಚ್ಚನ್

ಬಾಲಿವುಡ್ ನಟಿ ಐಶ್ವರ್ಯಾ ರೈ ಬಚ್ಚನ್ ಅವರು "ಇಂಟರ್ನ್ಯಾಷನಲ್ ಫಿಲ್ಮ್ ಫೆಸ್ಟಿವಲ್ ಅಂಡ್ ಆವಾರ್ಡ್ಸ್ ಆಫ್ ಆಸ್ಟ್ರೇಲಿಯಾ (IFFAA)" ದಲ್ಲಿಅತ್ಯುತ್ತಮ ನಟಿ ಪ್ರಶಸ್ತಿಯನ್ನು ಪಡೆದುಕೊಂಡರು. 2016ರಲ್ಲಿ ತೆರೆಕಂಡ ಸರ್ಬ್ಜಿತ್ ಚಿತ್ರದಲ್ಲಿನ ಅಭಿನಯಕ್ಕಾಗಿ ಈ ಪ್ರಶಸ್ತಿ ಲಭಿಸಿದೆ.

51. 2016ನೇ ಸಾಲಿನ ಸರಸ್ವತಿ ಸಮ್ಮಾನ್ ಪ್ರಶಸ್ತಿಗೆ ಈ ಕೆಳಗಿನ ಯಾರನ್ನು ಆಯ್ಕೆಮಾಡಲಾಗಿದೆ?

ಅ) ಮಹಾಬಲೇಶ್ವರ ಸೈಲ್

ಆ) ಸರೋಜ ದೇವಿ

ಇ) ಸರ್ಜಿತ್ ಪತ್ತರ್

ಈ) ಪದ್ಮ ಸಚ್ದೇವ್

ಮಹಾಬಲೇಶ್ವರ ಸೈಲ್

**2016ನೇ ಸಾಲಿನ ಸರಸ್ವತಿ ಸಮ್ಮಾನ್ ಪ್ರಶಸ್ತಿ ಕೊಂಕಣಿ ಲೇಖಕ ಮಹಾಬಲೇಶ್ವರ ಸೈಲ್** ಅವರಿಗೆ ಲಭಿಸಿದೆ. ಕಳೆದ ನಾಲ್ಕೂವರೆ ದಶಕಗಳಿಂದ ಸಾಹಿತ್ಯ ರಚನೆ ಮಾಡುತ್ತಿರುವ ಮಹಾಬಲೇಶ್ವರ ಸೈಲ್ ಕೊಂಕಣಿಯಲ್ಲಿ ಇದು ತನಕ 'ಪೆಲ್ತಾಡ್ಲೊ ಜ್ಯ ತಾರು', 'ತರಂಗಾನ್' 'ಬಾಯನಾತ್ ಫೈಟಿಂಗ್', 'ನಿಮನೊ ಅಶ್ವತ್ಥಾಮ' ಮತ್ತು 'ದೋನ್ ಮೂಳ್ಯಾಂಚೊ ಝೂಡ' ಎಂಬ ಐದು ಕಥಾ ಸಂಕಲನಗಳನ್ನು ತಂದಿದ್ದಾರೆ. 1993 ರಲ್ಲಿ ಅವರ 'ತರಂಗಾನ್' ಕಥಾ ಸಂಕಲನಕ್ಕೆ ಕೇಂದ್ರಸಾಹಿತ್ಯ ಪ್ರಶಸ್ತಿ ದೊರಕಿತ್ತು. ಅವರು ಏಳು ಕೊಂಕಣಿ ಕಾದಂಬರಿಗಳನ್ನು ಬರೆದಿದ್ದು ಅವು ಕ್ರಮವಾಗಿ 'ಕಾಳಿಗಂಗಾ', 'ಅದೃಷ್ಟ', 'ಅರಣ್ಯಕಾಂಡ', 'ಯುಗಸಂಹಾರ', 'ಖೋಲ್ ಖೋಲ್ ಮೂಳಾ', 'ಹಾಂವ್

www.karunaduexams.com

ಠಾಣ್', 'ವಿಖಾರ್ ವ್ವಿಳ್ಳೊ' ಮತ್ತು 'ಮಾಟಿ ಆಣಿ ಮಾಳಾಬ್'. ಅವರ 'ಕಾಳಿಗಂಗಾ' ಒಬ್ಬ ಹಳ್ಳಿಯ ಹೆಣ್ಣು ಮಗಳ ದಾರುಣ ಕತೆ.

52. ಈ ಕೆಳಗಿನ ಯಾರು "ಯುರೋಪ್ ಮಂಡಳಿ (European Council)"ಯ ನೂತನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ?

ಅ) ಡೋನಾಲ್ಡ್ ಟಸ್ಕ್

ಆ) ಮೈಕಲ್ ಜೇಮ್ಸ್

ಇ) ಕ್ರಿಸ್ಟೋಫರ್ ಕೆರ್ನ್

ಈ) ಡೇವಿಡ್ ಮಾರ್ಷಲ್

ಡೋನಾಲ್ಡ್ ಟಸ್ಕ್

ಪೋಲ್ಯಾಂಡ್ ಮೂಲದ ಡೋನಾಲ್ಡ್ ಟಸ್ಕ್ ಅವರು ಯುರೋಪಿಯನ್ ಕೌನ್ಸಿಲ್ ನ ಅಧ್ಯಕ್ಷರಾಗಿ ಮರು ನೇಮಕಗೊಂಡಿದ್ದಾರೆ. ನವೆಂಬರ್, 2019 ರವರೆಗೆ ಇವರು ಅಧಿಕಾರದಲ್ಲಿ ಇರಲಿದ್ದಾರೆ. ಯುರೋಪ್ ಮಂಡಳಿ ಯುರೋಪ್ ಒಕ್ಕೂಟದ ಸಂಸ್ಥೆಯಾಗಿದ್ದು, ಒಕ್ಕೂಟಕ್ಕೆ ಸಂಬಂಧಿಸಿದ ರಾಜಕೀಯ ನಿರ್ಣಯಗಳನ್ನು ಕೈಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ.

53. ಮಾತೃತ್ವ ಅನುಕೂಲ ಮಸೂದೆ-2016 ರಂತೆ ಸಂಭಾವನೆ ಸಹಿತ 12 ವಾರಗಳಷ್ಟೇ ಇದ್ದ ಮಾತೃತ್ವ ರಜೆಯನ್ನು ಎಷ್ಟು ವಾರಗಳಿಗೆ ವಿಸ್ತರಿಸಲಾಗಿದೆ?

ಅ) 24

ಆ) 26

ಇ) 18

ಈ) 22

26

ಮಾತೃತ್ವ ಅನುಕೂಲ ಮಸೂದೆ-2016 ಸಂಸತ್ತಿನಲ್ಲಿ ಅಂಗೀಕರಗೊಂಡಿದೆ. ಈ ಮಸೂದೆಯಲ್ಲಿ ಇದುವರೆಗೂ ಸಂಭಾವನೆ ಸಹಿತ 12 ವಾರಗಳಷ್ಟೇ ಇದ್ದ ಮಾತೃತ್ವ ರಜೆಯನ್ನು 26 ವಾರಗಳಿಗೆ ಹೆಚ್ಚಿಸಲಾಗಿದೆ. ಆ ಮೂಲಕ ಕೆನಡಾ ಮತ್ತು ನಾರ್ವೆ ನಂತರ ಅತಿ ಹೆಚ್ಚು ಮಾತೃತ್ವ ರಜೆಯನ್ನು ನೀಡುತ್ತಿರುವ ರಾಷ್ಟ್ರ ಭಾರತ.

54. ಯೂನಿಸೆಫ್ ಹಾಗೂ ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವ ಕಪ್ನ ರಾಯಭಾರಿಯಾಗಿ ಈ ಕೆಳಗಿನ ಯಾರು ನೇಮಕಗೊಂಡಿದ್ದಾರೆ?

ಅ) ರಾಹುಲ್ ದ್ರಾವಿಡ್

ಆ) ಸಚಿನ್ ತೆಂಡುಲ್ಕರ್

ಇ) ವಿವಿಎಸ್ ಲಕ್ಷಣ್

ಈ) ಸೌರವ್ ಗಂಗೂಲಿ

ಸಚಿನ್ ತೆಂಡುಲ್ಕರ್

www.karunaduexams.com

ಭಾರತದ ಕ್ರಿಕೆಟ್ ದಂತಕಥೆ ಸಚಿನ್ ತೆಂಡುಲ್ಕರ್ ಅವರು ಯೂನಿಸೆಫ್ ಹಾಗೂ ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವ ಕಪ್ನ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. ಮಹಿಳಾ ಕ್ರಿಕೆಟ್ ವಿಶ್ವಕಪ್ ಜೂನ್ 2017 ರಿಂದ ಬ್ರಿಟನ್ ನಲ್ಲಿ ನಡೆಯಲಿದೆ.

55. ಕೇಂದ್ರ ಜಲ ಆಯೋಗದ ನೂತನ ಅಧ್ಯಕ್ಷರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ನರೇಂದ್ರ ಕುಮಾರ್

ಆ) ಅಶಿಶ್ ಚಟರ್ಜಿ

ಇ) ಮುರಳಿ ಮುಖರ್ಜಿ

ಈ) ಸಂತೋಷ್ ನಾಯಕ್

ನರೇಂದ್ರ ಕುಮಾರ್

ಸೆಂಟ್ರಲ್ ವಾಟರ್ ಎಂಜನಿಯರಿಂಗ್ ಸರ್ವೀಸ್ ನ 1979ನೇ ಬ್ಯಾಚ್ ನ ಅಧಿಕಾರಿ ನರೇಂದ್ರ ಕುಮಾರ್ ಅವರು ಕೇಂದ್ರ ಜಲ ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಕೇಂದ್ರ ಜಲ ಆಯೋಗವನ್ನು 1945ರಲ್ಲಿ ಸ್ಥಾಪಿಸಲಾಗಿದೆ.

56. ಇತ್ತೀಚೆಗೆ ನಿಧನರಾದ "ಅರವಿಂದ್ ಪದ್ಮನಾಭನ್" ರವರು ಯಾವ ಕ್ಷೇತ್ರದಲ್ಲಿ ಪ್ರಸಿದ್ದರಾಗಿದ್ದರು?

ಅ) ಕಲೆ

ಆ) ಪತ್ರಿಕೋದ್ಯಮ

ಇ) ವಿಜ್ಞಾನ

ಈ) ಸಿನಿಮಾ

ಪತ್ರಿಕೋದ್ಯಮ

ಹಿರಿಯ ಪತ್ರಕರ್ತ ಹಾಗೂ ಇಂಡೋ-ಏಷಿಯನ್ ನ್ಯೂಸ್ ಸರ್ವೀಸ್ (IANS)ನ ಕಾರ್ಯನಿರ್ವಾಹಕ ಸಂಪಾದಕರಾಗಿದ್ದ ಅರವಿಂದ್ ಪದ್ಮನಾಭನ್ ನಿಧನರಾದರು. ಅರವಿಂದ್ ಅವರು ಟೈಮ್ಸ್ ಆಫ್ ಇಂಡಿಯಾ, ಟಿವಿ18 ಹಾಗೂ ಪ್ರೆಸ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾದಲ್ಲಿ ಸೇವೆಸಲ್ಲಿಸಿದ್ದರು.

57. ಯಾವ ರಾಜ್ಯ ಉದ್ಯೋಗ ಆಕಾಂಕ್ಷಿಗಳಿಗೆ "ಮೇರಾ ಹೂನರ್ (Mera Hunar)" ಮೊಬೈಲ್ ಅಪ್ಲಿಕೇಷನ್ ಜಾರಿಗೆ ತಂದಿದೆ?

ಅ) ಹಿಮಾಚಲ ಪ್ರದೇಶ

ಆ) ಮಧ್ಯ ಪ್ರದೇಶ

ಇ) ಒಡಿಶಾ

ಈ) ರಾಜಸ್ತಾನ

ಹಿಮಾಚಲ ಪ್ರದೇಶ

ಹಿಮಾಚಲ ಪ್ರದೇಶ ರಾಜ್ಯದ ಉದ್ಯೋಗ ಆಕಾಂಕ್ಷಿಗಳಿಗೆ "ಮೇರಾ ಹೂನರ್" ಮೊಬೈಲ್ ಅಪ್ಲಿಕೇಷನ್ ಜಾರಿಗೆ ತಂದಿದೆ. ದೇಶದಲ್ಲೆ ಇದೊಂದು ವಿನೂತನ

www.karunaduexams.com

ವ್ಯವಸ್ಥೆಯಾಗಿದೆ. ಕೌಶಲ್ಯ, ಅರೆ ಕೌಶಲ್ಯ ಉದ್ಯೋಗ ಆಕಾಂಕ್ಷಿಗಳು ಈ ಆಪ್ ಮೂಲಕ ಉದ್ಯೋಗಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ.

58. "ನ್ಯಾಷನಲ್ ಆರ್ಕೈವ್ ಆಫ್ ಇಂಡಿಯಾ (National Archive of India)"ದ ಕೇಂದ್ರ ಕಚೇರಿ ಎಲ್ಲಿದೆ?

ಅ) ನವ ದೆಹಲಿ

ಆ) ಪುಣೆ

ಇ) ಮುಂಬೈ

ಈ) ಬೆಂಗಳೂರು

ನವ ದೆಹಲಿ

ನ್ಯಾಷನಲ್ ಆರ್ಕೈವ್ ಆಫ್ ಇಂಡಿಯಾ ನವದೆಹಲಿಯಲ್ಲಿದೆ. ಮಾರ್ಚ್ 11, 2017 ರಂದು ಇದರ 127ನೇ ಸಂಸ್ಥಾಪನ ದಿನಾಚರಣೆ.

59. ಸೈನ್ಸ್ ಅಂಡ್ ಎಂಜನಿಯರಿಂಗ್ ರಿಸರ್ಚ್ ಬೋರ್ಡ್ ನ "SERB Distinguished Award" ಪ್ರಶಸ್ತಿ ಯಾರಿಗೆ ಲಭಿಸಿದೆ?

ಅ) ಸುಧೀರ್ ದರ್ಪಣ್

ಆ) ರಮಣ್ ಚೌಧರಿ

ಇ) ಲಾಲ್ಜಿ ಸಿಂಗ್

ಈ) ಹಿಮಾಂಶು ಸಿಂಗ್

ಲಾಲ್ಜಿ ಸಿಂಗ್

ಸೆಂಟರ್ ಫಾರ್ ಸೆಲ್ಯೂಲಾರ್ ಅಂಡ್ ಮಾಲಿಕ್ಯೂಲರ್ ಬಯಾಲಾಜಿ ಮಾಜಿ ನಿರ್ದೇಶಕ ಹಾಗೂ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಕುಲಪತಿ ಲಾಲ್ಜಿ ಸಿಂಗ್ ಅವರಿಗೆ ಸೈನ್ಸ್ ಅಂಡ್ ಎಂಜನಿಯರಿಂಗ್ ರಿಸರ್ಚ್ ಬೋರ್ಡ್ ನ "SERB Distinguished Award" ಪ್ರಶಸ್ತಿ ಲಭಿಸಿದೆ. ಲಾಲ್ಜಿ ಸಿಂಗ್ ಅವರು ಪ್ರಸ್ತುತ ಹೈದ್ರಾಬಾದಿನಲ್ಲಿ "ಜಿನೋಮ್ ಫೌಂಡೇಷನ್" ಎನ್ನುವ ಸಂಸ್ಥೆಯನ್ನು ನಡೆಸುತ್ತಿದ್ದಾರೆ.

60. "From Inside the Steel Frame: The Memoirs of an Administrator" ಪುಸ್ತಕದ ಲೇಖಕರು ________?

ಅ) ಅಶೋಕ್ ಪಾಂಡೆ

ಆ) ಗಿರೀಶ್ ಚಂದ್ರ

ಇ) ಚಂದ್ರ ಮೋಹನ್

ಈ) ಅರುಣ್ ಸಾಗರ್

ಅಶೋಕ್ ಪಾಂಡೆ

ನಿವೃತ್ತ ಹಿರಿಯ ಐಎಎಸ್ ಅಧಿಕಾರಿ ಅಶೋಕ್ ಪಾಂಡೆ ಅವರು ಈ ಪುಸ್ತಕವನ್ನು ಬರೆದಿದ್ದಾರೆ. ಬಿಹಾರದ ಸಣ್ಣ ಹಳ್ಳಿಯಿಂದ ದೆಹಲಿಯಲ್ಲಿ ಅತ್ಯುನ್ನತ

www.karunaduexams.com

ಹುದ್ದೆಯನ್ನು ಪಡೆಯುವ ವರೆಗೆ ತಮ್ಮ ಪ್ರಯಾಣವನ್ನು ಪುಸ್ತಕದಲ್ಲಿ ವಿಶ್ಲೇಷಿಸಲಾಗಿದೆ.

61. 'ವಿಶ್ವ ಸೈಬರ್ ಸೆನ್ಸರ್ ಷಿಪ್ ವಿರೋಧಿ ದಿನ' ವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಮಾರ್ಚ್ 10

ಆ) ಮಾರ್ಚ್ 11

ಇ) ಮಾರ್ಚ್ 12

ಈ) ಮಾರ್ಚ್ 13

ಮಾರ್ಚ್ 12

62. ಸಂತೋಷ್ ಟ್ರೋಫಿ ಫುಟ್ ಬಾಲ್ ಟೂರ್ನಮೆಂಟ್-2017 ನಲ್ಲಿ ಚಾಂಪಿಯನ್ನಾಗಿ ಹೊರಹೊಮ್ಮಿದ ಭಾರತದ ತಂಡ ಯಾವುದು?

ಅ) ಪಂಜಾಬ್

ಆ) ಬಂಗಾಳ

ಇ) ರೈಲ್ವೇಸ್

ಈ) ಮುಂಬೈ

ಪಂಜಾಬ್

63. ಗಡಿ ಸಂರಕ್ಷಣೆ ಬಗ್ಗೆ ಅಧ್ಯಯನ ನಡೆಸಲು ಕೇಂದ್ರ ಸರ್ಕಾರಕ್ಕೆ ಯಾವ ಸಮಿತಿಯನ್ನು ರಚಿಸಿತ್ತು?

ಅ) ಎಸ್.ಜೆ.ಠಾಕೂರ್ ಸಮಿತಿ

ಆ) ಜೆ.ಜೆ. ಚಟರ್ಜಿ ಸಮಿತಿ

ಇ) ನಾಗೇಂದ್ರ ಸಮಿತಿ

ಈ) ಮಧುಕರ್ ಗುಪ್ತ ಸಮಿತಿ

ಮಧುಕರ್ ಗುಪ್ತ ಸಮಿತಿ

ಭಾರತ-ಪಾಕಿಸ್ತಾನ ದೇಶದ ಗಡಿಯಲ್ಲಿ ಸುರಕ್ಷತೆ ಹೆಚ್ಚಿಸಲು ಮತ್ತು ಪ್ರಸ್ತಾವಿತ ತಂತಿ ಬೇಲಿಯ ಸಾಧಕ-ಬಾಧಕಗಳನ್ನು ಅಧ್ಯಯನ ನಡೆಸಲು ಕೇಂದ್ರ ಸರ್ಕಾರ ಮಧುಕರ್ ಗುಪ್ತ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತ್ತು. ಸದ್ಯ ಈ ಸಮಿತಿ ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಗಡಿ ಸಂರಕ್ಷಣೆಯಲ್ಲಿ ಮೂಲಭೂತ ಸೌಕರ್ಯ, ತಾಂತ್ರಿಕ ಮತ್ತು ಆಡಳಿತಾತ್ಮಕ ಸಮಸ್ಯಗಳು, ಗಡಿಯಲ್ಲಿ ಸೈನ್ಯದ ಜಮಾವಣೆ ಮತ್ತು ಗಡಿ ರಕ್ಷಣೆಯಲ್ಲಿ ಉದ್ಭವವಾಗುವಂತ ಸಮಸ್ಯಗಳ ಬಗ್ಗೆ ಸಮಿತಿ ದೀರ್ಘವಾದ ವರದಿ ನೀಡಿದೆ.

64. ಉದ್ಯೋಗದಲ್ಲಿ ಆರೋಗ್ಯ ಮತ್ತು ರಕ್ಷಣೆ ಬಗ್ಗೆ "ಅಂತರರಾಷ್ಟ್ರೀಯ ವಿಷನ್ ಜೀರೋ" ಸಮ್ಮೇಳನವನ್ನು ಯಾವ ನಗರದಲ್ಲಿ ಆಯೋಜಿಸಲಾಗಿತ್ತು?



www.karunaduexams.com

ಅ) ಬೆಂಗಳೂರು

ಆ) ದೆಹಲಿ

ಇ) ಗಾಂಧಿನಗರ

ಈ) ಪುಣೆ

ದೆಹಲಿ

ಉದ್ಯೋಗದಲ್ಲಿ ಆರೋಗ್ಯ ಮತ್ತು ರಕ್ಷಣೆ ಬಗ್ಗೆ "ಅಂತರರಾಷ್ಟ್ರೀಯ ವಿಷನ್ ಜೀರೋ" ಸಮ್ಮೇಳನವನ್ನು ದೆಹಲಿಯಲ್ಲಿ ಆಯೋಜಿಸಲಾಗಿತ್ತು. ಉದ್ಯೋಗದ ಸ್ಥಳದಲ್ಲಿ ಆರೋಗ್ಯ ಮತ್ತು ರಕ್ಷಣೆ ಉತ್ತೇಜಿಸುವ ಸಲುವಾಗಿ ಈ ಸಮ್ಮೇಳನದಲ್ಲಿ ಮಾಹಿತಿ ವಿನಿಮಯ ಮತ್ತು ಅನುಭವ ಹಂಚಿಕೊಳ್ಳಲು ವೇದಿಕೆಯಾಗಿದೆ.

65. ಮಹಿಳೆಯರ ಸುರಕ್ಷತೆಗಾಗಿ "ಅಮ್ಮಾವಿನ್ ಆರನ್" (Ammavin Aran) ಎಂಬ ರಕ್ಷಣಾ ಆ್ಯಪ್ ನ್ನು ಯಾವ ರಾಜ್ಯ ಸರ್ಕಾರ ಪ್ರಾರಂಭಿಸಿದೆ?

ಅ) ಕೇರಳ

ಆ) ತಮಿಳುನಾಡು

ಇ) ಮಹಾರಾಷ್ಟ್ರ

ಈ) ಗುಜರಾತ್

ತಮಿಳುನಾಡು

ತಮಿಳುನಾಡಿನ ಎಐಎಡಿಎಂಕೆ ಯ ಮಾಹಿತಿ ತಂತ್ರಜ್ಞಾನ ಅಂಗ ಸಂಸ್ಥೆ ಮಹಿಳೆಯರ ಸುರಕ್ಷತೆಗಾಗಿ "ಅಮ್ಮಾವಿನ್ ಆರನ್" (Ammavin Aran) ಎಂಬ ರಕ್ಷಣಾ ಆ್ಯಪ್ ನ್ನು ಪ್ರಾರಂಭಿಸಿದೆ. ಈ ಆ್ಯಪ್ ನಲ್ಲಿ ಬಳಕೆದಾರರಿಗೆ ಹತ್ತಿರದ ಆರಕ್ಷಕ ಠಾಣೆಯ ಮತ್ತು ಆಸ್ಪತ್ರೆ ದೂರವಾಣಿ ಸಂಖ್ಯೆ ಮತ್ತು ಭೂಪಟದ ಮಾಹಿತಿ ನೀಡುತ್ತದೆ. ಯಾವುದೇ ಅಹಿತಕರ ಸನ್ನಿವೇಶದಲ್ಲಿ ದೊಡ್ಡದಾದ ಶಬ್ದ ಮಾಡುವ ವ್ಯವಸ್ಥೆಯನ್ನು ಈ ಆ್ಯಪ್ ನಲ್ಲಿ ಕಲ್ಪಿಸಲಾಗಿದೆ.

66. ಮಹಿಳಾ ಉದ್ಯಮಿಗಳಿಗೆ ಬಂಡವಾಳ ಒದಗಿಸುವ ಸಲುವಾಗಿ Idea2POC ಎಂಬ ಅನುದಾನ ವ್ಯವಸ್ಥೆಯನ್ನು ಕಲ್ಪಿಸಿದ ರಾಜ್ಯ ಯಾವುದು?

ಅ) ಗುಜರಾತ್

ಆ) ಮಹಾರಾಷ್ಟ್ರ

ಇ) ರಾಜಸ್ತಾನ

ಈ) ಕರ್ನಾಟಕ

ಕರ್ನಾಟಕ

ಮಹಿಳಾ ಉದ್ಯಮಿಗಳಿಗೆ ಬಂಡವಾಳ ಒದಗಿಸುವ ಸಲುವಾಗಿ ರೂ. 10 ಕೋಟಿಯ Idea2POC ಎಂಬ ಅನುದಾನ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯ ಸರ್ಕಾರ ಪ್ರಾರಂಭಿಸಿದೆ. ಈ ಯೋಜನೆಯಡಿ ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಬಯೋಟೆಕ್ನಾಲಜಿ ಮತ್ತು ವಿಜ್ಞಾನ-ತಂತ್ರಜ್ಞಾನ ಇಲಾಖೆ ರೂ. 50

www.karunaduexams.com

ಲಕ್ಷದವರೆಗೆ ಹೊಸ ಅನ್ವೇಷಣೆ ಕೈಗೊಳ್ಳುವ ಮಹಿಳಾ ಉದ್ಯಮಿಗಳಿಗೆ ಅನುದಾನ ಒದಗಿಸಲಿದೆ.

67. ಗ್ರಾಮೀಣ ಬಡ ಜನರಿಗಾಗಿ "ಆದರ್ಶ್ ಗ್ರಾಮ ಯೋಜನೆ" ಯನ್ನು ಯಾವ ರಾಜ್ಯ ಸರ್ಕಾರ ಪ್ರಾರಂಭಿಸಿದೆ?

ಅ) ಅರುಣಾಚಲ ಪ್ರದೇಶ

ಆ) ಕರ್ನಾಟಕ

ಇ) ಉತ್ತರ ಪ್ರದೇಶ

ಈ) ಒಡಿಸ್ಸಾ

ಅರುಣಾಚಲ ಪ್ರದೇಶ

ಅರುಣಾಚಲ ಪ್ರದೇಶ ರಾಜ್ಯ ಸರ್ಕಾರ ಗ್ರಾಮೀಣ ಬಡ ಜನರಿಗಾಗಿ "ಆದರ್ಶ್ ಗ್ರಾಮ ಯೋಜನೆ" ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಿದೆ. ತನ್ನ ರಾಜ್ಯದ ಗ್ರಾಮೀಣ ಭಾಗದ ಬಡ ಜನರ ಕಲ್ಯಾಣ ಈ ಯೋಜನೆಯ ಮೂಲ ಉದ್ದೇಶ. 2017-18 ರಲ್ಲಿ ಸುಮಾರು 123 ಗ್ರಾಮಗಳನ್ನು ಆದರ್ಶ ಗ್ರಾಮಗಳನ್ನಾಗಿ ಪರಿವರ್ತಿಸುವುದು ಈ ಯೋಜನೆಯ ಧ್ಯೇಯವಾಗಿದೆ. ಗ್ರಾಮೀಣ ಮೂಲಸೌಕರ್ಯ ಅಭಿವೃದ್ದಿ, ಉದ್ಯೋಗ ಅವಕಾಶ ಮತ್ತು ಸಮುದಾಯ ಆಸ್ತಿ ನಿರ್ಮಾಣ ಮಾಡುವುದಕ್ಕಾಗಿ ಸುಮಾರು ರೂ. 93 ಕೋಟಿಗಳನ್ನು ಮೀಸಲಿರಿಸಿದೆ.

68. ದೇಶದಲ್ಲಿ ಬ್ಲೂ ರೆವಲ್ಯೂಷನ್ ಸಾಧಿಸುವುದಕ್ಕಾಗಿ ಕೇಂದ್ರ ಕೃಷಿ ಸಚಿವಾಲಯ ಯಾವ ಕಾರ್ಯಕ್ರಮವನ್ನು ಪ್ರಾರಂಭಿಸಿದೆ?

ಅ) ಮಿಷನ್ ಬ್ಲೂ ಲೈಫ್

ಆ) ಮಿಷನ್ ಫಿಂಗರ್ ಲಿಂಗ್

ಇ) ಓಷನ್ ಫಿಂಗರ್ ಲಿಂಗ್

ಈ) ನ್ಯಾಷನಲ್ ಬ್ಲೂ ಲೈಫ್

ಮಿಷನ್ ಫಿಂಗರ್ ಲಿಂಗ್

69. ಕೆಳಗಿನ ಹೇಳಿಕೆಗಳನ್ನು ಗಮನಿಸಿ:

1 ಕರ್ನಾಟಕ ಸರ್ಕಾರ "ನಮ್ಮ (ಇಂದಿರಾ) ಕ್ಯಾಂಟೀನ್"ನ್ನು ರಾಜ್ಯದೆಲ್ಲೆಡೆ ಪ್ರಾರಂಭಿಸಲಿದೆ.

2 ತಮಿಳುನಾಡು ಸರ್ಕಾರ "ಅಮ್ಮಾ ಕ್ಯಾಂಟೀನ್" ನ್ನು ರಾಜ್ಯದೆಲ್ಲೆಡೆ ಪ್ರಾರಂಭಿಸಿದೆ

ಉತ್ತರಗಳು:

ಅ) ಹೇಳಿಕೆ 1 ಮಾತ್ರ ಸರಿಯಾಗಿದೆ

ಆ) ಹೇಳಿಕೆ 2 ಮಾತ್ರ ಸರಿಯಾಗಿದೆ

ಇ) ಹೇಳಿಕೆ 1 ಮತ್ತು 2 ಸರಿಯಾಗಿದೆ

www.karunaduexams.com

ಈ) ಹೇಳಿಕೆ 1 ಮತ್ತು 2 ತಪ್ಪಾಗಿದೆ

ಹೇಳಿಕೆ 1 ಮತ್ತು 2 ಸರಿಯಾಗಿದೆ

70. "Crime and Criminal Tracking Network & Systems (CCTNS)" ನೊಂದಿಗೆ ಸಂಪರ್ಕ ಹೊಂದಿದ ಭಾರತದ ಪ್ರಪ್ರಥಮ ಪೊಲೀಸ್ ಠಾಣೆ ಯಾವ ನಗರದಲ್ಲಿದೆ?

ಅ) ಬೆಂಗಳೂರು

ಆ) ಹೈದರಾಬಾದ್

ಇ) ಶಿಮ್ಲಾ

ಈ) ಮುಂಬೈ

ಶಿಮ್ಲಾ

ಹಿಮಾಚಲ ಪ್ರದೇಶದ ಶಿಮ್ಲಾ ನಗರದ ಸಂಜೋಲಿ ಪೊಲೀಸ್ ಠಾಣೆ ದೇಶವ್ಯಾಪಿ ಆನ್ ಲೈನ್ ವ್ಯವಸ್ಥೆಯಾದ "Crime and Criminal Tracking Network & Systems (CCTNS)" ನೊಂದಿಗೆ ಸಂಪರ್ಕ ಹೊಂದಿದ ಭಾರತದ ಪ್ರಪ್ರಥಮ ಪೊಲೀಸ್ ಠಾಣೆಯಾಗಿದೆ. ಈ ವ್ಯವಸ್ಥೆಯಡಿ ಸಾರ್ವಜನಿಕರು ಆನ್ ಲೈನ್/ಆಫ್ ಲೈನ್ ಮುಖೇನ ದೂರು ದಾಖಲಿಸಲು, ಉದ್ಯೋಗಾಕಾಂಕ್ಷಿಗಳ ಪೊಲೀಸ್ ಸತ್ಯಾಪನೆ ಮಾಡಲು, ಬಾಡಿಗೆದಾರರ ನಡವಳಿ ಪ್ರಮಾಣಪತ್ರ ಪಡೆಯಲು ಬಳಸಬಹುದಾಗಿದೆ.

71. 2017 ಕಾಮನ್ ವೆಲ್ತ್ ದಿನದ ಧ್ಯೇಯವಾಕ್ಯ ___________?

ಅ) A Peace Building Commonwealth

ಆ) Commonwealth for Peace

ಇ) Commonwealth for better tomorrow

ಈ) Peace for Need

A Peace Building Commonwealth

ಪ್ರತಿ ವರ್ಷ ಮಾರ್ಚ್ ತಿಂಗಳ ಎರಡನೇ ಸೋಮವಾರದಂದು ಕಾಮನ್ ವೆಲ್ತ್ ದಿನವನ್ನು ಆಚರಿಸಲಾಗುತ್ತದೆ. ಕಾಮನ್ ವೆಲ್ತ್ ಒಕ್ಕೂಟದ ಧ್ಯೇಯವನ್ನು ವಿಶ್ವಕ್ಕೆ ಸಾರುವುದು ಈ ದಿನದ ಉದ್ದೇಶ ಈ ವರ್ಷ ಮಾರ್ಚ್ 13 ರಂದು ಕಾಮನ್ ವೆಲ್ತ್ ದಿನವನ್ನು ಆಚರಿಸಲಾಗುತ್ತಿದ್ದು, A Peace Building Commonwealth ಧ್ಯೇಯವಾಕ್ಯವಾಗಿದೆ.

72. 2017 ಹೀರೋ ಇಂಡಿಯನ್ ಓಪನ್ ಗಾಲ್ಫ್ ಟೂರ್ನಮೆಂಟಿನಲ್ಲಿ ಪ್ರಶಸ್ತಿಯನ್ನು ಗೆದ್ದವರು ಯಾರು?

ಅ) ಶಿವ್ ಚೌರಸಿಯ

ಆ) ಚಿಕ್ಕರಂಗಪ್ಪ

ಇ) ಚಿನ್ನಸ್ವಾಮಿ ಮುನಿಯಪ್ಪ

ಈ) ಜ್ಯೋತಿ ರಾಧ್ವ

ಶಿವ್ ಚೌರಸಿಯ

ಶಿವ್ ಶಂಕರ್ ಪ್ರಸಾದ್ ಚೌರಸಿಯ ಅವರು 2017 2017 ಹೀರೋ ಇಂಡಿಯನ್ ಓಪನ್ ಗಾಲ್ಫ್ ಟೂರ್ನಮೆಂಟಿನಲ್ಲಿ ಪ್ರಶಸ್ತಿಯನ್ನು ಜಯಿಸಿದರು. ಚೌರಸಿಯ ಅವರಿಗಿದು 6ನೇ ಅಂತಾರಾಷ್ಟ್ರೀಯ ಪ್ರಶಸ್ತಿ.

73. "ಔರಂಗಜೇಜ್: ದಿ ಮ್ಯಾನ್ ಅಂಡ್ ದಿ ಮಿಥ್ (Aurangzeb: The Man and The Myth)" ಪುಸ್ತಕದ ಲೇಖಕರು ________?

ಅ) ಡೇವಿಡ್ ಬೆತ್ಲೆಮ್

ಆ) ಆಡ್ರೆ ಟ್ರುಸ್ಚ್ಕೆ

ಇ) ಸಂಪತ್ ಕುಮಾರ್

ಈ) ಕಿರಣ್ ಜೈನ್

ಆಡ್ರೆ ಟ್ರುಸ್ಚ್ಕೆ

ಪ್ರಖ್ಯಾತ ಇತಿಹಾಸಗಾರ ಆಡ್ರೆ ಟ್ರುಸ್ಚ್ಕೆ ಅವರು "ಔರಂಗಜೇಜ್: ದಿ ಮ್ಯಾನ್ ಅಂಡ್ ದಿ ಮಿಥ್ (Aurangzeb: The Man and The Myth)" ಪುಸ್ತಕದ ಲೇಖಕರು. ಮೊಘಲ್ ಸಾಮ್ರಾಜ್ಯದ ಆರನೇ ದೊರೆ ಔರಂಗಜೇಬಗೆ ಸಂಬಂಧಿಸಿದ ಮಾಹಿತಿಯನ್ನು ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ.

74. ಈ ಕೆಳಗಿನ ಯಾರು "2017 ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್ ಷಿಪ್" ನಲ್ಲಿ ಪ್ರಶಸ್ತಿ ಜಯಿಸಿದರು?

ಅ) ಲೀ ಚಾಂಗ್ ವೇಯ್

ಆ) ಷಿ ಯೂಕಿ

ಇ) ಲೂ ಕಾಯ್

ಈ) ಲೀ ಚಾಂಗ್ ಯೂಕಿ

ಲೀ ಚಾಂಗ್ ವೇಯ್

ಮಲೇಷಿಯಾದ ಲೀ ಚಾಂಗ್ ವೇಯ್ ಅವರು 2017 ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್ ಷಿಪ್ ನಲ್ಲಿ ಚೀನಾದ ಷಿ ಯೂಕಿಯನ್ನು ಮಣಿಸಿ ಪ್ರಶಸ್ತಿಯನ್ನು ಗೆದ್ದುಕೊಂಡರು.

75. ಈ ಮುಂದಿನ ಯಾವ ದೇಶ 22ನೇ ಏಷ್ಯಾ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್ ನ ಅತಿಥ್ಯವಹಿಸಲಿದೆ?

ಅ) ಭಾರತ

ಆ) ಜಪಾನ್

ಇ) ಚೀನಾ

ಈ) ಪಾಕಿಸ್ತಾನ

ಭಾರತ

www.karunaduexams.com

22ನೇ ಏಷ್ಯಾ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್ ಒಡಿಶಾದ ಭುಬನೇಶ್ವರದಲ್ಲಿರುವ ಕಳಿಂಗ ಕ್ರೀಡಾಂಗಣದಲ್ಲಿ ಜುಲೈ 2017ರಲ್ಲಿ ನಡೆಯಲಿದೆ. ಈ ಕ್ರೀಡಾಕೂಟ ಮೂರನೇ ಬಾರಿಗೆ ಭಾರತದಲ್ಲಿ ಆಯೋಜನೆಗೊಳ್ಳುತ್ತಿದೆ. ಈ ಹಿಂದೆ ನವದೆಹಲಿ 1989 ರಲ್ಲಿ ಹಾಗೂ ಪುಣೆ 2013ರಲ್ಲಿ ಕ್ರೀಡಾಕೂಟವನ್ನು ಆಯೋಜಿಸಲಾಗಿತ್ತು. 45 ದೇಶಗಳಿಂದ ಸುಮಾರು 800 ಕ್ರೀಡಾಪಟುಗಳು ಈ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ.

76. "ವಿಶ್ವ ಕಿಡ್ನಿ ದಿನ"ವನ್ನು ಪ್ರತಿ ವರ್ಷ ಮಾರ್ಚ್ ತಿಂಗಳ ಎರಡನೇ _______ ರಂದು ಆಚರಿಸಲಾಗುತ್ತದೆ?

ಅ) ಬುಧವಾರ

ಆ) ಗುರುವಾರ

ಇ) ಮಂಗಳವಾರ

ಈ) ಶನಿವಾರ

ಗುರುವಾರ

ಪ್ರತೀ ವರ್ಷ ಮಾರ್ಚ್ ತಿಂಗಳ ಎರಡನೇ ಗುರುವಾರವನ್ನು ಕಿಡ್ನಿ ದಿನವೆಂದು ಆಚರಿಸಲಾಗುತ್ತದೆ. ಈ ಬಾರಿ ಮಾರ್ಚ್ 9ರಂದು ಇದನ್ನು ವಿಶ್ವಾದ್ಯಂತ ಆಚರಿಸಲಾಗುತ್ತಿದೆ. ಇಂಟರ್‌ನ್ಯಾಷನಲ್ ಸೊಸೈಟಿ ಆಫ್ ನೆಫ್ರೋಲಜಿ ಮತ್ತು ಇಂಟರ್‌ನ್ಯಾಷನಲ್ ಫೆಡರೇಷನ್ ಆಫ್ ಕಿಡ್ನಿ ಫೌಂಡೇಷನ್ ಜಂಟಿ ಸಮಿತಿ ಮೊದಲ ಬಾರಿ ವಿಶ್ವ ಕಿಡ್ನಿ ದಿನವನ್ನು ಆರಂಭಿಸಿತ್ತು. ಕಿಡ್ನಿ ಸಂಬಂಧಿತ ಹೆಚ್ಚಿನ ಸಮಸ್ಯೆಗಳನ್ನು ಬಾರದಂತೆ ತಡೆಯಬಹುದು ಮತ್ತು ಹಲವು ಕಾಯಿಲೆಗಳನ್ನು ಔಷಧದಿಂದ ಗುಣಪಡಿಸಲು ಸಾಧ್ಯವಿದೆ. ಆದರೆ ಈ ಬಗ್ಗೆ ಹೆಚ್ಚಿನವರಿಗೆ ಅರಿವಿಲ್ಲ. ಈ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಅಭಿಯಾನಗಳನ್ನು ನಡೆಸಿ ಎಲ್ಲರಿಗೂ ಮನವರಿಕೆಯಾಗುವಂತೆ ಮಾಡುವುದು ವಿಶ್ವ ಕಿಡ್ನಿ ದಿನದ ಪ್ರಮುಖ ಉದ್ದೇಶವಾಗಿದೆ.

77. ಈ ಕೆಳಗಿನ ಯಾರು ಭಾರತದ ನೂತನ ರಕ್ಷಣಾ ಸಚಿವರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ?

ಅ) ಅರುಣ್ ಜೇಟ್ಲಿ

ಆ) ರಾಜನಾಥ್ ಸಿಂಗ್

ಇ) ನಿತಿನ್ ಗಡ್ಕರಿ

ಈ) ಮುಖ್ತರ್ ಅಬ್ಬಾಸ್ ನಾಕ್ವಿ

ಅರುಣ್ ಜೇಟ್ಲಿ

ಕೇಂದ್ರ ಹಣಕಾಸು ಹಾಗೂ ಕಾರ್ಪೋರೆಟ್ ವ್ಯವಹಾರ ಸಚಿವ ಅರುಣ್ ಜೇಟ್ಲಿ ಅವರು ರಕ್ಷಣಾ ಸಚಿವರಾಗಿ ಹೆಚ್ಚುವರಿ ಅಧಿಕಾರವನ್ನು ವಹಿಸಿಕೊಂಡರು. ಗೋವಾ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಮನೋಹರ್ ಪಣಿಕ್ಕರ್ ಅವರಿಂದ ತೆರವಾಗಿದ್ದ ಸ್ಥಾನವನ್ನು ಜೇಟ್ಲಿ ತುಂಬಿದ್ದಾರೆ.



www.karunaduexams.com

78. "2017 ವಿಶ್ವ ಗ್ರಾಹಕರ ಹಕ್ಕುಗಳ ದಿನ (World Consumer Rights Day)" ಧ್ಯೇಯವಾಕ್ಯ ________?

ಅ) Building a Digital World Consumers can Trust

ಆ) Consumer Rights for Corruption free Society

ಇ) Our Consumers Our Rights

ಈ) Ask your Rights

Building a Digital World Consumers can Trust

ವಿಶ್ವ ಗ್ರಾಹಕರ ಹಕ್ಕುಗಳ ದಿನವನ್ನು ಮಾರ್ಚ್ 15 ರಂದು ಆಚರಿಸಲಾಗುತ್ತದೆ. Building a Digital World Consumers can Trust ಇದು ಈ ವರ್ಷದ ಧ್ಯೇಯವಾಕ್ಯ.

79. ದೇಶದ ಅತಿ ದೊಡ್ಡ ತೇಲುವ ಸೌರ ವಿದ್ಯುತ್ ಘಟಕವನ್ನು ಯಾವ ರಾಜ್ಯದಲ್ಲಿ ಸ್ಥಾಪಿಸಲಾಗಿದೆ?

ಅ) ಕೇರಳ

ಆ) ಮಹಾರಾಷ್ಟ್ರ

ಇ) ಗುಜರಾತ್

ಈ) ಮಧ್ಯ ಪ್ರದೇಶ

ಕೇರಳ

ದೇಶದ ಅತಿ ದೊಡ್ಡ ತೇಲುವ ಸೌರ ವಿದ್ಯುತ್ ಘಟಕವನ್ನು ಕೇರಳದಲ್ಲಿ ಸ್ಥಾಪಿಸಲಾಗಿದೆ. ನ್ಯಾಷನಲ್ ಥರ್ಮಲ್ ಪವರ್ ಕಾರ್ಪೋರೇಶನ್ ಈ ಸೌರ ಘಟಕವನ್ನು ಸ್ಥಾಪಿಸಿದೆ.

80. ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಮನ್ಹರ್ ವಾಲ್ಜಿ ಬಾಯ್ ಝಲ

ಆ) ಕಿಶೋರ್ ದೇಶಪಾಂಡೆ

ಇ) ಚರಣ್ ಚಂದ್ರ

ಈ) ಅರುಣ್ ಉಪಾಧ್ಯಾಯ

ಮನ್ಹರ್ ವಾಲ್ಜಿ ಬಾಯ್ ಝಲ

ಗುಜರಾತ್ ನ ಹಿರಿಯ ಬಿಜೆಪಿ ನಾಯಕ ಹಾಗೂ ಮಾಜಿ ಶಾಸಕ ಮನ್ಹರ್ ವಾಲ್ಜಿ ಬಾಯ್ ಝಲ ಅವರನ್ನು ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ.

www.karunaduexams.com

81. “2017 ಕೃಷಿ ಉನ್ನತಿ ಮೇಳ (Agriculture Science Fair)” ನಡೆದ ನಗರ ಯಾವುದು?

ಅ) ನವದೆಹಲಿ

ಆ) ಪುಣೆ

ಇ) ಬೆಂಗಳೂರು

ಈ) ಚೆನ್ನೈ

ನವದೆಹಲಿ

2017 ಕೃಷಿ ಉನ್ನತಿ ಮೇಳವನ್ನು ನವದೆಹಲಿಯ ಐಸಿಎಆರ್ ಆವರಣದಲ್ಲಿ ಆಯೋಜಿಸಲಾಗಿತ್ತು. ಐಸಿಎಆರ್ ಹಾಗೂ ಕೃಷಿ ಸಚಿವಾಲಯ ಈ ಮೇಳವನ್ನು ಆಯೋಜಿಸಿದ್ದವು.

82. ಈ ಕೆಳಗಿನ ಯಾವ ಸಚಿವಾಲಯ ನೀಲಿ ಕ್ರಾಂತಿಯನ್ನು ಸಾಧಿಸುವ ಸಲುವಾಗಿ "ಮಿಷನ್ ಫಿಂಗರ್ಲಿಂಗ್” ಕಾರ್ಯಕ್ರಮವನ್ನು ಜಾರಿಗೊಳಿಸಿದೆ?

ಅ) ಕೇಂದ್ರ ಆಹಾರ ಸಂಸ್ಕರಣ ಸಚಿವಾಲಯ

ಆ) ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ

ಇ) ಕೇಂದ್ರ ಬಂದರು ಸಚಿವಾಲಯ

ಈ) ಕೇಂದ್ರ ಜಲ ಸಂಪನ್ಮೂಲ, ನದಿ ಅಭಿವೃದ್ಧಿ ಮತ್ತು ಗಂಗಾ ಪುನರ್ಜೀವನ ಸಚಿವಾಲಯ

ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ

ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ ನೀಲಿ ಕ್ರಾಂತಿಯನ್ನು ಸಾಧಿಸುವ ಸಲುವಾಗಿ "ಮಿಷನ್ ಫಿಂಗರ್ಲಿಂಗ್” ಕಾರ್ಯಕ್ರಮವನ್ನು ಜಾರಿಗೊಳಿಸಿದೆ. ಮೀನುಗಾರಿಕೆ ಕ್ಷೇತ್ರವನ್ನು ಸುಸ್ಥಿರ ಮತ್ತು ಸಮಗ್ರ ಅಭಿವೃದ್ಧಿ ಮಾಡುವ ಮೂಲಕ ಮತ್ತು ಮೀನುಗಾರಿಕೆ ರೈತರ ಹಿತರಕ್ಷಣೆ ಕಾಯುವುದು ಕಾರ್ಯಕ್ರಮದ ಧ್ಯೇಯ.

83. "ಕ್ರೈಂ ಅಂಡ್ ಕ್ರಿಮಿನಲ್ ಟ್ರಾಕಿಂಗ್ ನೆಟ್ವರ್ಕ್ & ಸಿಸ್ಟಂ” ನೊಂದಿಗೆ ಸಂಪರ್ಕ ಹೊಂದಿದ ದೇಶದ ಮೊಟ್ಟ ಮೊದಲ ಪೊಲೀಸ್ ಠಾಣೆ ಯಾವುದು?

ಅ) ಗುವಾಹಟಿ

ಆ) ಶಿಮ್ಲಾ

ಇ) ಪುಣೆ

ಈ) ಹೈದ್ರಾಬಾದ್

ಶಿಮ್ಲಾ

www.karunadueexams.com

ಹಿಮಾಚಲ ಪ್ರದೇಶದ ಶಿಮ್ಲಾ ನಗರದಲ್ಲಿರುವ ಸಂಜೌಲಿ ಪೊಲೀಸ್ ಠಾಣೆ ಕ್ರೈಂ ಅಂಡ್ ಕ್ರಿಮಿನಲ್ ಟ್ರಾಕಿಂಗ್ ನೆಟ್ವರ್ಕ್ & ಸಿಸ್ಟಂ" ನೊಂದಿಗೆ ಸಂಪರ್ಕ ಹೊಂದಿದ ದೇಶದ ಮೊಟ್ಟ ಮೊದಲ ಪೊಲೀಸ್ ಠಾಣೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ವಿಭದ್ರ ಸಿಂಗ್ ಅವರು ಸಿಸಿಟಿಎನ್ಎಸ್ ಸಿಸ್ಟಂ ಅನ್ನು ಉದ್ಘಾಟಿಸಿದರು.

84. "2017 ರಾಷ್ಟ್ರೀಯ ರಂಗಭೂಮಿ ಉತ್ಸವ (National Theatre Festival)" ಆತಿಥ್ಯ ವಹಿಸಲಿರುವ ರಾಜ್ಯ ಯಾವುದು?

ಅ) ಕೇರಳ

ಆ) ಜಾರ್ಖಂಡ್

ಇ) ಉತ್ತರ ಪ್ರದೇಶ

ಈ) ಕರ್ನಾಟಕ

ಕೇರಳ

2017 ರಾಷ್ಟ್ರೀಯ ರಂಗಭೂಮಿ ಉತ್ಸವ ಕೇರಳದ ಠಾಗೂರ್ ಥಿಯೇಟರ್ ನಲ್ಲಿ ಆರಂಭಗೊಂಡಿತು. ಮಾರ್ಚ್ 16 ರಿಂದ ಮಾರ್ಚ್ 24ರ ವರೆಗೆ ಈ ಉತ್ಸವ ನಡೆಯಲಿದೆ. ಭಾರತ ರಂಗಭೂಮಿ ಕ್ಷೇತ್ರದ ದಿಗ್ಗಜ ಕವಲಂ ನಾರಾಯಣ ಪಣಿಕ್ಕರ್ ಅವರಿಗೆ ಈ ಬಾರಿಯ ಉತ್ಸವವನ್ನು ಅರ್ಪಿಸಲಾಗಿದೆ.

85. "So You Want to Know About the Environment" ಪುಸ್ತಕದ ಲೇಖಕರು __________?

ಅ) ಬಿಜಲ್ ವಚ್ಛರಜನಿ

ಆ) ಸುಧೀಂದ್ರ ಚಟರ್ಜಿ

ಇ) ಶೇಖರ್ ಮೆನನ್

ಈ) ಶ್ರೀಧರ್ ಚಂದ್ರುನ್

ಬಿಜಲ್ ವಚ್ಛರಜನಿ

86. 2017 ಜಿ-20 ರಾಷ್ಟ್ರಗಳ ಹಣಕಾಸು ಸಚಿವರ ಹಾಗೂ ಸೆಂಟ್ರಲ್ ಬ್ಯಾಂಕ್ ಗವರ್ನರ್ ಗಳ ಸಭೆ ಯಾವ ದೇಶದಲ್ಲಿ ಜರುಗಿತು?

ಅ) ಫ್ರಾನ್ಸ್

ಆ) ಜರ್ಮನಿ

ಇ) ಇಟಲಿ

ಈ) ಜಪಾನ್

ಜರ್ಮನಿ

2017 ಜಿ-20 (G-20) ರಾಷ್ಟ್ರಗಳ ಹಣಕಾಸು ಸಚಿವರ ಹಾಗೂ ಸೆಂಟ್ರಲ್ ಬ್ಯಾಂಕ್ ಗವರ್ನರ್ ಗಳ ಸಭೆ ಜರ್ಮನಿಯ ಬಡೆನ್-ಬಡೆನ್ ನಗರದಲ್ಲಿ ನಡೆಯಿತು. ಎರಡು ದಿನಗಳ ಕಾಲ ನಡೆದ ಈ ಸಭೆಯಲ್ಲಿ ಜಾಗತಿಕ ಆರ್ಥಿಕತೆಯ ಅಭಿವೃದ್ದಿಯ ಬಗ್ಗೆ ಪ್ರಮುಖವಾಗಿ ಚರ್ಚಿಸಲಾಯಿತು.

www.karunaduexams.com

87. ಈ ಕೆಳಗಿನ ಯಾವ ರಾಜ್ಯದಲ್ಲಿ ಅಂತಾರಾಷ್ಟ್ರೀಯ ಭೌದ್ಧ ಸಮ್ಮೇಳನ “21ನೇ ಶತಮಾನದಲ್ಲಿ ಭೌದ್ಧಧರ್ಮ” ಆಯೋಜಿಸಲಾಗಿತ್ತು?

ಅ) ಮಹಾರಾಷ್ಟ್ರ

ಆ) ಕೇರಳ

ಇ) ಬಿಹಾರ

ಈ ನಾಗಲ್ಯಾಂಡ್

ಬಿಹಾರ

ಮೂರು ದಿನಗಳ ಅಂತಾರಾಷ್ಟ್ರೀಯ ಭೌದ್ಧ ಸಮ್ಮೇಳನ “21ನೇ ಶತಮಾನದಲ್ಲಿ ಭೌದ್ಧಧರ್ಮ” ಬಿಹಾರದ ನವ ನಳಂದ ಮಹಾವೀರ, ರಾಜಗಿರ್ ನಲ್ಲಿ ಮಾರ್ಚ್ 17 ರಿಂದ ಆರಂಭಗೊಂಡಿದೆ. 35 ದೇಶಗಳ ಭೌದ್ಧ ಧರ್ಮದ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

88. ಈ ಮುಂದಿನ ಯಾವ ಸಂಸದೀಯ ಸಮಿತಿ ಸರ್ಕಾರಿ ಸ್ವಾಮ್ಯದ ಬಿಎಸ್ಎನ್ಎಲ್ ಮತ್ತು ಎಂಟಿಎನ್ಎಲ್ ಸಂಸ್ಥೆಗಳ ದೀರ್ಘಕಾಲದ ಉಳಿವಿಕೆಗಾಗಿ ವಿಲೀನಿಗೊಳಿಸುವಂತೆ ಶಿಫಾರಸ್ಸು ಮಾಡಿದೆ?

ಅ) ಭಗತ್ ಸಿಂಗ್ ಕೋಶ್ಯಾರಿ ಸಮಿತಿ

ಆ) ಅರವಿಂದ್ ಸಾವಂತ್ ಸಮಿತಿ

ಇ) ಅಶೋಕ್ ಲಾವಸ ಸಮಿತಿ

ಈ) ವೀರಪ್ಪ ಮೊಹ್ಲಿ ಸಮಿತಿ

ಭಗತ್ ಸಿಂಗ್ ಕೋಶ್ಯಾರಿ ಸಮಿತಿ

ಬಿಜೆಪಿ ಸಂಸದ ಭಗತ್ ಸಿಂಗ್ ಕೋಶ್ಯಾರಿ ನೇತೃತ್ವದ ಸಂಸತ್ತು ಅರ್ಜಿಗಳ ಸಮಿತಿ ಸರ್ಕಾರಿ ಸ್ವಾಮ್ಯದ ಬಿಎಸ್ಎನ್ಎಲ್ ಮತ್ತು ಎಂಟಿಎನ್ಎಲ್ ದೂರವಾಣಿ ಸಂಸ್ಥೆಗಳನ್ನು ವಿಲೀನಗೊಳಿಸುವಂತೆ ಶಿಫಾರಸ್ಸು ಮಾಡಿದೆ. ವಿಲೀನ ಪ್ರಕ್ರಿಯೆಯಿಂದ ಸರ್ಕಾರಿ ಸ್ವಾಮ್ಯದ ದೊಡ್ಡ ಸಂಸ್ಥೆಗೆ ನಾಂದಿಯಾಗಲಿದ್ದು, ಖಾಸಗಿ ಸಂಸ್ಥೆಗಳಿಗೆ ಪ್ರತಿಸ್ಪರ್ಧೆ ಒಡ್ಡಲು ಸಾಧ್ಯವಾಗಲಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

89. ಭಾರತೀಯ ಕ್ರೀಡಾ ಪ್ರಾಧಿಕಾರದ (SAI) ಆಡಳಿತ ಮಂಡಳಿಗೆ ನೂತನ ಸದಸ್ಯರಾಗಿ ನೇಮಕಗೊಂಡ ಬ್ಯಾಡ್ಮಿಂಟನ್ ಕ್ರೀಡಾಪಟು ಯಾರು?

ಅ) ಜ್ವಾಲಾ ಗುಟ್ಟ

ಆ) ಪಿ ವಿ ಸಿಂಧು

ಇ) ಸೈನಾ ನೆಹ್ವಾಲ್

ಈ) ಪ್ರಕಾಶ್ ಪಡುಕೋಣೆ

ಜ್ವಾಲಾ ಗುಟ್ಟ

www.karunaduexams.com

ಭಾರತದ ಖ್ಯಾತ ಬ್ಯಾಡ್ಮಿಂಟನ್ ಕ್ರೀಡಾಪಟು ಜ್ವಾಲಾ ಗುಟ್ಟ ಅವರು ಭಾರತೀಯ ಕ್ರೀಡಾ ಪ್ರಾಧಿಕಾರದ ಆಡಳಿತ ಮಂಡಳಿಗೆ ಸದಸ್ಯರಾಗಿ ನೇಮಕಗೊಂಡಿದ್ದಾರೆ.

90. ಟೈಮ್ಸ್ ಉನ್ನತ ಶಿಕ್ಷಣದ ಏಷ್ಯಾ ವಿಶ್ವವಿದ್ಯಾಲಯಗಳ ಶ್ರೇಯಾಂಕ-2017 ರಲ್ಲಿ ಪ್ರಥಮ ಸ್ಥಾನ ಪಡೆದುಕೊಂಡ ವಿಶ್ವವಿದ್ಯಾಲಯ ಯಾವುದು?

ಅ) ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು
ಆ) ಪೆಕಿಂಗ್ ವಿಶ್ವವಿದ್ಯಾಲಯ, ಚೀನಾ
ಇ) ನ್ಯಾಷನಲ್ ಯೂನಿವರ್ಸಿಟಿ ಆಫ್ ಸಿಂಗಪುರ
ಈ) ಐಐಟಿ, ಬಾಂಬೆ

ನ್ಯಾಷನಲ್ ಯೂನಿವರ್ಸಿಟಿ ಆಫ್ ಸಿಂಗಪುರ

ಟೈಮ್ಸ್ ಉನ್ನತ ಶಿಕ್ಷಣದ ಏಷ್ಯಾ ವಿಶ್ವವಿದ್ಯಾಲಯಗಳ ಶ್ರೇಯಾಂಕ-2017 ರಲ್ಲಿ ಏಷ್ಯಾದ 300 ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ನ್ಯಾಷನಲ್ ಯೂನಿವರ್ಸಿಟಿ ಆಫ್ ಸಿಂಗಪುರ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ. ಶ್ರೇಯಾಂಕದಲ್ಲಿ ಬೆಂಗಳೂರಿನ ಐಐಎಸ್ಸಿ 27ನೇ ಸ್ಥಾನ ಹಾಗೂ ಐಐಟಿ ಬಾಂಬೆ 42ನೇ ಸ್ಥಾನವನ್ನು ಪಡೆದುಕೊಂಡಿದೆ.

91. ಅಮೆರಿಕದ ಅತ್ಯಂತ ಪ್ರತಿಷ್ಠಿತ "ರೆಜೆನೆರಾನ್ ಸೈನ್ಸ್ ಟ್ಯಾಲೆಂಟ್ ಸರ್ಚ್ (STS) -2017" ಪಡೆದುಕೊಂಡ ಭಾರತ-ಅಮೆರಿಕಾ ವ್ಯಕ್ತಿ ಯಾರು?

ಅ) ಇಂದ್ರಾಣಿ ದಾಸ್
ಆ) ಅಶುತೋಷ್ ಸಿಂಗ್
ಇ) ಅಭಿಲಾಷ ಗೌಡ
ಈ) ನವೀನ್ ಭಟ್ಟಚಾರ್ಯ

ಇಂದ್ರಾಣಿ ದಾಸ್

ಅಮೆರಿಕದ ಅತ್ಯಂತ ಪ್ರತಿಷ್ಠಿತ ವಿಜ್ಞಾನ ಮತ್ತು ಗಣಿತ ಪ್ರಶಸ್ತಿ ರೆಜೆನೆರಾನ್ ಸೈನ್ಸ್ ಟ್ಯಾಲೆಂಟ್ ಸರ್ಚ್ (STS) -2017"ಯನ್ನು ಭಾರತ ಸಂಜಾತ ಬಾಲಕಿ ಇಂದ್ರಾಣಿ ದಾಸ್ (17) ಅವರು ಪಡೆದಿದ್ದಾರೆ. ಈ ಪ್ರಶಸ್ತಿಯ ಮೊತ್ತ ₹1.67 ಕೋಟಿ. ಮಿದುಳಿನ ಗಾಯದಿಂದ ನರಕೋಶಗಳಿಗೆ ಹಾನಿಯಾಗುವುದನ್ನು ತಡೆಗಟ್ಟುವ ಬಗ್ಗೆ ನಡೆಸಿದ ಸಂಶೋಧನೆಗೆ ಈ ಪ್ರಶಸ್ತಿ ನೀಡಲಾಗಿದೆ. ಇಂಡಿಯಾನದ ಅರ್ಜುನ್ ರಮಣಿ (18) ಅವರು ತೃತೀಯ ಸ್ಥಾನ ಪಡೆದಿದ್ದು, ₹1 ಕೋಟಿ ಮೊತ್ತದ ಬಹುಮಾನ ತನ್ನದಾಗಿಸಿಕೊಂಡಿದ್ದಾರೆ.

92. ಬೇರ್ಪಟ್ಟ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವ ಸಲುವಾಗಿ ಭಾರತ ಈ ಕೆಳಗಿನ ಯಾವ ದೇಶದೊಂದಿಗೆ ಸಾಮಾಜಿಕ ಭದ್ರತಾ ಒಪ್ಪಂದಕ್ಕೆ ಇತ್ತೀಚೆಗೆ ಸಹಿ ಮಾಡಿದೆ?

ಅ) ಜರ್ಮನಿ
ಆ) ಜಪಾನ್



www.karunaduexams.com

ಇ) ಬ್ರೆಜಿಲ್
ಈ) ಮೆಕ್ಸಿಕೊ
ಬ್ರೆಜಿಲ್
ಬೇರ್ಪಟ್ಟ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವ ಸಲುವಾಗಿ ಭಾರತ ಸರ್ಕಾರ ಬ್ರೆಜಿಲ್ ನೊಂದಿಗೆ ಸಾಮಾಜಿಕ ಭದ್ರತಾ ಒಪ್ಪಂದಕ್ಕೆ ಸಹಿ ಹಾಕಿದೆ. ಒಪ್ಪಂದದ ಪ್ರಕಾರ ಉಭಯ ದೇಶಗಳಲ್ಲಿರುವ ಬೇರ್ಪಟ್ಟ ಕಾರ್ಮಿಕರು ತಮ್ಮ ದೇಶಗಳಲ್ಲಿ ಸಾಮಾಜಿಕ ಭದ್ರತೆಗೆ ದೇಣಿಗೆ ನೀಡುತ್ತಿದ್ದಲ್ಲಿ, ಅಂತವರು ಕೆಲಸ ಮಾಡುವ ದೇಶದಲ್ಲಿ ದೇಣಿಗೆ ನೀಡುವುದರಿಂದ ವಿನಾಯತಿ ನೀಡಲಾಗಿದೆ. ಭಾರತ ಇದುವರೆಗೆ 18 ರಾಷ್ಟ್ರಗಳೊಂದಿಗೆ ಇಂತಹ ಒಪ್ಪಂದಕ್ಕೆ ಸಹಿ ಹಾಕಿದೆ.

93. "ಇಂಡಿಕಾ: ಎ ಡೀಪ್ ನ್ಯಾಚುರಲ್ ಹಿಸ್ಟರಿ ಆಫ್ ದಿ ಇಂಡಿಯನ್ ಸಬ್ ಕಾಂಟಿನೆಂಟ್ (Indica: A Deep Natural History of the Indian Subcontinent)" ಪುಸ್ತಕದ ಲೇಖಕರು ಯಾರು?
ಅ) ಜಾನ್ ಮಿಲ್ಲರ್
ಆ) ಸ್ಟೀವನ್ ಸ್ಮಿತ್
ಇ) ಪ್ರಣಯ್ ಲಾಲ್
ಈ) ವಾಲ್ಮೀಕಿ ಥಾಪರ್
ಪ್ರಣಯ್ ಲಾಲ್

94. ಈ ಕೆಳಗಿನ ಯಾರು ಉತ್ತರಖಂಡದ ನೂತನ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದಾರೆ?
ಅ) ಆರ್ ಪಿ ನಿಶಾಂಕ್
ಆ) ತ್ರಿವೇಂದ್ರ ಸಿಂಗ್ ರಾವತ್
ಇ) ಬಿ ಸಿ ಖಂಡೂರಿ
ಈ) ಅಮರ್ ನಾಥ್ ಸಿಂಗ್
ತ್ರಿವೇಂದ್ರ ಸಿಂಗ್ ರಾವತ್
ಭಾರತೀಯ ಜನತಾ ಪಕ್ಷದ ಹಿರಿಯ ನಾಯಕ ತ್ರಿವೇಂದ್ರ ಸಿಂಗ್ ರಾವತ್ ಅವರು ಉತ್ತರಖಂಡದ 8ನೇ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 70 ಕ್ಷೇತ್ರಗಳ ಪೈಕಿ 57 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು.

95. ಇತ್ತೀಚೆಗೆ ನಿಧನರಾದ ರಾಕ್ ಆ್ಯಂಡ್ ರೋಲ್ ದಂತಕತೆ "ಚಕ್ ಬೆರಿ (Chuck Berry)" ಯಾವ ದೇಶದವರು?
ಅ) ಅಮೆರಿಕ
ಆ) ಬ್ರಿಟನ್
ಇ) ಸ್ಪೇನ್
ಈ) ಆಸ್ಟ್ರೇಲಿಯಾ

www.karunaduexams.com

ಅಮೆರಿಕ

ಅಮೆರಿಕದ ರಾಕ್ ಆ್ಯಂಡ್ ರೋಲ್ ಸಂಗೀತದ ದಂತಕತೆ ಚಕ್ ಬೆರಿ (90) ನಿಧನರಾದರು. ರೋಲ್ ಓವರ್ ಬಿಥೋವೆನ್,ಯು ನೆವರ್ ಕಾನ್ಟ್ ಕ್ಯಾಚ್ ಮಿ, ಸ್ವೀಟ್ ಲಿಟಲ್ ಸಿಕ್ಸ್ಟೀನ್ , ಜೋನಿ ಬಿ ಗುಡಿ ಮೊದಲಾದ ಆಲ್ಬಂಗಳ ಮೂಲಕ ಜನಪ್ರಿಯತೆ ಗಳಿಸಿದ ಸಂಗೀತಗಾರನಾಗಿದ್ದರು ಚಾರ್ಲ್ಸ್ ಎಡ್ವರ್ಡ್ ಆಂಡರ್ಸನ್ ಬೆರಿ ಎಂಬ ಚಕ್ ಬೆರಿ. Johnny B. Goode ಹಾಡು 2010ರ ನ್ ಮ್ಯಾಗಜಿನ್‌ನಲ್ಲಿ ಶ್ರೇಷ್ಠ ಹಾಡುಗಳ ಪಟ್ಟಿಯಲ್ಲಿ ಸ್ಥಾನಪಡೆದುಕೊಂಡಿತ್ತು.ಸಂಗೀತ ಲೋಕಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಇವರಿಗೆ 1984ರಲ್ಲಿ ಗ್ರ್ಯಾಮಿ ಪ್ರಶಸ್ತಿ ನೀಡಲಾಗಿತ್ತು.

96. ಭಾರತದಲ್ಲೇ ತಯಾರಿಸಿ ಯೋಜನೆ ಅನುಸಾರ ಸಂಪೂರ್ಣವಾಗಿ ಸ್ವದೇಶಿ ತಂತ್ರಜ್ಞಾನ ಬಳಸಿ ನಿರ್ಮಿಸಿದ "ಮೇಧಾ" ರೈಲು ಯಾವ ಮಾರ್ಗದಲ್ಲಿ ಸಂಚಾರ ಪ್ರಾರಂಭಿಸಿತು?

ಅ) ಪುಣೆ-ಮುಂಬೈ

ಆ) ದಾದರ್-ಬೊರಿವಲಿ

ಇ) ಹೈದರಾಬಾದ್-ಕನ್ಯಾಕುಮಾರಿ

ಈ) ಪಾಟ್ನಾ-ಕೋಲ್ಕೊತ್ತಾ

ದಾದರ್-ಬೊರಿವಲಿ

ಸಂಪೂರ್ಣವಾಗಿ ಸ್ವದೇಶಿ ತಂತ್ರಜ್ಞಾನ ಬಳಸಿ ನಿರ್ಮಿಸಿದ 12 ಬೋಗಿಗಳ "ಮೇಧಾ" ರೈಲು, ದಾದರ್-ಬೊರಿವಲಿ ಮಾರ್ಗದಲ್ಲಿ ತನ್ನ ಸಂಚಾರ ಪ್ರಾರಂಭಿಸಿತು. ಈ ರೈಲನ್ನು ಚೆನ್ನೈನ ಇಂಟಿಗ್ರಲ್ ಕೋಚ್ ಫ್ಯಾಕ್ಟರಿಯಲ್ಲಿ ನಿರ್ಮಾಣ ಮಾಡಲಾಗಿದೆ. ಈ ರೈಲು ಗಂಟೆಗೆ 110 ಕಿ.ಮೀ. ವೇಗದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿದೆ, ವಿದ್ಯುತ್ ಶಕ್ತಿ ಉಳಿಸುವ ಸಲುವಾಗಿ ರೈಲಿನಲ್ಲಿ ಎಲ್.ಇ.ಡಿ. ಬಲ್ಬ್ ಬಳಕೆ ಮಾಡಲಾಗಿದ್ದು ಇದರಿಂದ ಶೇ.30 ರಿಂದ 35 ರಷ್ಟು ಶಕ್ತಿ ಉಳಿತಾಯವಾಗಲಿದೆ.

97. ಸ್ತನ ಆರೋಗ್ಯದ ಬಗ್ಗೆ ಮಾಹಿತಿ ನೀಡುವ ವಿಶ್ವದ ಮೊಟ್ಟಮೊದಲ ಮೊಬೈಲ್ ಆ್ಯಪ್ ನ್ನು ಯಾರು ಅನಾವರಣಗೊಳಿಸಿದರು?

ಅ) ಅಮಿರ್ ಖಾನ್

ಆ) ಅಕ್ಷಯ್ ಕುಮಾರ್

ಇ) ಅಮಿತಾಬ್ ಬಚ್ಚನ್

ಈ) ದೀಪಿಕಾ ಪಡುಕೋಣೆ

ಅಮಿತಾಬ್ ಬಚ್ಚನ್

ಅಮಿತಾಬ್ ಬಚ್ಚನ್ ರವರು ವಿಶ್ವದ ಮೊಟ್ಟಮೊದಲ ಸ್ತನ ಆರೋಗ್ಯದ ಬಗ್ಗೆ ಮಾಹಿತಿ ನೀಡುವ "ABC ಆಫ್ ಬ್ರೆಸ್ಟ್ ಹೆಲ್ತ್" ಎಂಬ ಮೊಬೈಲ್ ಆ್ಯಪ್ ನ್ನು ಮುಂಬೈನಲ್ಲಿ ಲೋಕಾರ್ಪಣೆ ಮಾಡಿದರು. ಈ ಆ್ಯಪ್ ಒಟ್ಟು 12 ಭಾಷೆಗಳಲ್ಲಿ ಲಭ್ಯವಿದ್ದು, ಜನರಲ್ಲಿ ಸ್ತನ ಕ್ಯಾನ್ಸರ್ ಮತ್ತು ಆರೋಗ್ಯದ ಬಗ್ಗೆ ಜಾಗೃತಿ

www.karunaduexams.com

ಮೂಡಿಸಿ, ಆರೋಗ್ಯ ಕಾಪಾಡಲು ಸಹಾಯ ಮಾಡುವುದು ಈ ಆ್ಯಪ್ ನ ಉದ್ದೇಶವಾಗಿದೆ.

98. ಈ ಕೆಳಗಿನ ಯಾವ ದೇಶ ಅಂತಾರಾಷ್ಟ್ರೀಯ ವಜ್ರ ಸಮ್ಮೇಳನ "ಮೈನ್ಸ್ ಟು ಮಾರ್ಕೆಟ್ (Mines to Market)-2017" ಆತಿಥ್ಯ ವಹಿಸಲಿದೆ?

ಅ) ಭಾರತ

ಆ) ದಕ್ಷಿಣ ಆಫ್ರಿಕಾ

ಇ) ಬ್ರೆಜಿಲ್

ಈ) ಕೀನ್ಯಾ

ಭಾರತ

ಮುಂಬೈನ ಹೋಟೆಲ್ ಗ್ರ್ಯಾಂಡ್ ಯಾಟ್ ನಲ್ಲಿ ಅಂತಾರಾಷ್ಟ್ರೀಯ ವಜ್ರ ಸಮ್ಮೇಳನ "ಮೈನ್ಸ್ ಟು ಮಾರ್ಕೆಟ್ (Mines to Market)-2017" ಮಾರ್ಚ್ 19 ರಿಂದ ನಡೆಯಲಿದೆ. ದೇಶ ವಿದೇಶಗಳ ವಜ್ರ ಗಣಿಗಾರಿಕೆಗಾರರು, ರಫ್ತುದಾರರು, ರಿಟೇಲ್ ವ್ಯಾಪಾರಸ್ಥರು ಹಾಗೂ ತಜ್ಞರು ಸಮ್ಮೇಳನದಲ್ಲಿ ಭಾಗವಹಿಸಲಿದ್ದು, ಜಾಗತಿಕ ಮಟ್ಟದಲ್ಲಿ ವಜ್ರ ಉದ್ದಿಮೆ ಎದುರಿಸುತ್ತಿರುವ ಸವಾಲುಗಳ ಬಗ್ಗೆ ಚರ್ಚಿಸಲಿವೆ.

99. "2017 ಈಡೆನ್ ವಿಶ್ವ ಮಹಿಳಾ ಸ್ನೂಕರ್ ಚಾಂಪಿಯನ್ ಷಿಪ್" ನಲ್ಲಿ ಬೆಳ್ಳಿ ಗೆದ್ದ ಭಾರತೀಯ ಕ್ರೀಡಾಪಟು ಯಾರು?

ಅ) ವಿದ್ಯಾ ಪಿಳ್ಳೈ

ಆ) ಚಿತ್ರಾ ಮಗಿಮೈರಾಜ್

ಇ) ಅರಾಂತ್ಕ್ಸಾ ಸಂಚಿಸ್

ಈ) ಉಮಾದೇವಿ ನಾಗರಾಜ್

ವಿದ್ಯಾ ಪಿಳ್ಳೈ

100. 2018 ರಲ್ಲಿ ನೆಡೆಯುವ ಅಂಧರ ಏಕ ದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ರಾಯಭಾರಿಯಾಗಿ ಆಯ್ಕೆಯಾದ ಕ್ರಿಕೆಟ್ ಆಟಗಾರ ಯಾರು?

ಅ) ವಿರಾಟ್ ಕೊಹ್ಲಿ

ಆ) ಸಚಿನ್ ತೆಂಡೂಲ್ಕರ್

ಇ) ಗ್ರೇಮ್ ಸ್ಮಿತ್

ಈ) ಶಾಹಿದ್ ಅಫ್ರೀದಿ

ಶಾಹಿದ್ ಅಫ್ರೀದಿ

ಪಾಕಿಸ್ತಾನ ಕ್ರಿಕೆಟ್ ತಂಡದ ಮಾಜಿ ನಾಯಕ ಶಾಹಿದ್ ಅಫ್ರೀದಿ ಅವರು 5ನೇ ಅಂಧರ ಏಕ ದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿ-2018ರ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. ಯುಎಇ ಮತ್ತು ಪಾಕಿಸ್ತಾನದಲ್ಲಿ ಈ ವಿಶ್ವಕಪ್ ಟೂರ್ನಿ ನಡೆಯಲಿದೆ.

www.karunaduexams.com

101. ವಿಶ್ವಸಂಸ್ಥೆಯ 'ಆ್ಯಂಟಿಮೈಕ್ರೋಬಿಯಲ್ ರೆಸಿಸ್ಟೆಂನ್ಸ್" ಗುಂಪಿಗೆ ಭಾರತದ ಪ್ರತಿನಿಧಿಯಾಗಿ ಆಯ್ಕೆಯಾದವರು ಯಾರು?

ಅ) ಸೌಮ್ಯ ಸ್ವಾಮಿನಾಥನ್

ಆ) ಮುಕುಲ್ ಆನಂದ್

ಇ) ಅರವಿಂದ್ ಪನಗಾರಿಯ

ಈ) ಮೇಘರಾಜ್ ಸಹಾ

ಸೌಮ್ಯ ಸ್ವಾಮಿನಾಥನ್

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ ನಿರ್ದೇಶಕರಾಗಿರುವ ಸೌಮ್ಯ ಸ್ವಾಮಿನಾಥನ್ ಅವರು ವಿಶ್ವಸಂಸ್ಥೆಯಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ 'ಆ್ಯಂಟಿಮೈಕ್ರೋಬಿಯಲ್ ರೆಸಿಸ್ಟೆಂನ್ಸ್" ಗುಂಪಿಗೆ ಭಾರತದ ಪ್ರತಿನಿಧಿಯಾಗಿ ನೇಮಕಗೊಂಡಿದ್ದಾರೆ. ಸ್ವಾಮಿನಾಥನ್ ಅವರು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಡಿಪಾರ್ಟ್‌ಮೆಂಟ್ ಆಫ್ ಹೆಲ್ತ್ ರಿಸರ್ಚಿನ ಕಾರ್ಯದರ್ಶಿ ಸಹ ಆಗಿದ್ದಾರೆ.

102. ಗ್ರಾಮೀಣ ಭಾಗದ ಗ್ರಾಹಕರಿಗಾಗಿ "ಮೇರಾ ಐ-ಮೊಬೈಲ್" ಎಂಬ ಮೊಬೈಲ್ ಬ್ಯಾಂಕಿಂಗ್ ಆ್ಯಪ್ ನ್ನು ಪ್ರಾರಂಭಿಸಿದ ಬ್ಯಾಂಕ್ ಯಾವುದು?

ಅ) ಆಕ್ಸಿಸ್ ಬ್ಯಾಂಕ್

ಆ) ಪಂಜಾಬ್ ನ್ಯಾಷನಲ್ ಬ್ಯಾಂಕ್

ಇ) ಐಸಿಐಸಿಐ ಬ್ಯಾಂಕ್

ಈ) ಕಾರ್ಪೊರೇಷನ್ ಬ್ಯಾಂಕ್

ಐಸಿಐಸಿಐ ಬ್ಯಾಂಕ್

ಗ್ರಾಮೀಣ ಭಾಗದ ಗ್ರಾಹಕರಿಗೆ ಬ್ಯಾಂಕಿಂಗ್ ಮತ್ತು ಕೃಷಿ ಸೇವೆಯ ಮಾಹಿತಿ ನೀಡುವ ಉದ್ದೇಶದಿಂದ ಐಸಿಐಸಿಐ ಬ್ಯಾಂಕ್ "ಮೇರಾ ಐ-ಮೊಬೈಲ್" ಎಂಬ ಮೊಬೈಲ್ ಬ್ಯಾಂಕಿಂಗ್ ಆ್ಯಪ್ ನ್ನು ಪ್ರಾರಂಭಿಸಿದೆ. ಸದ್ಯ 11 ಭಾರತೀಯ ಭಾಷೆಗಳಲ್ಲಿ ಆ್ಯಪ್ ಲಭ್ಯವಿದ್ದು, ಈ ಆ್ಯಪ್ ನಲ್ಲಿ ಕಿಸಾನ್ ಕ್ರೆಡಿಟ್ ಕಾರ್ಡ್, ಗೋಲ್ಡ್ ಲೋನ್, ಕೃಷಿ ಸಲಕರಣೆಗಳ ಸಾಲ ಮುಂತಾದ ಸೇವೆಗಳ ಬಗ್ಗೆ ಮಾಹಿತಿ ಲಭ್ಯವಿರುತ್ತದೆ.

103. ಇತ್ತೀಚೆಗೆ ನಿಧನರಾದ "ಚಿನು ಮೋದಿ" ಅವರು ಯಾವ ಭಾಷೆಯ ಪ್ರಸಿದ್ಧ ಕವಿ?

ಅ) ಗುಜರಾತಿ

ಆ) ಮಲೆಯಾಳಂ

ಇ) ತೆಲುಗು

ಈ) ಭೋಜಪುರಿ

www.karunaduexams.com

ಗುಜರಾತಿ
ಗುಜರಾತಿನ ಪ್ರಸಿದ್ಧ ಕವಿ ಹಾಗೂ ಘಜಲ್ ಬರಹಗಾರ ಚಿನು ಮೋದಿ ಅಹಮದಾಬಾದಿನಲ್ಲಿ ನಿಧನರಾದರು. ಮೋದಿ ಅವರು ಹಲವಾರು ಕವಿತೆ, ನಾಟಕ, ಕಾದಂಬರಿಗಳನ್ನು ರಚಿಸುವ ಮೂಲಕ ಗುಜರಾತಿ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದರು.

104. ಈ ಕೆಳಗಿನ ಯಾರು 2017ನೇ "ಇಂಡಿಯನ್ ವೆಲ್ಸ್ ಎಟಿಪಿ ಟೆನಿಸ್' ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು?

ಅ) ರೋಜರ್ ಫೆಡರರ್
ಆ) ಸ್ಟ್ಯಾನಿಸ್ಲಾಸ್ ವಾವ್ರಿಂಕ
ಇ) ನೊವಾಕ್ ಜೊಕೊವಿಕ್
ಈ) ಆಂಡಿ ಮುರ್ರೆ

ರೋಜರ್ ಫೆಡರರ್
ಸ್ವಿಟ್ಸರ್‌ಲ್ಯಾಂಡಿನ ಟೆನಿಸ್ ತಾರೆ ರೋಜರ್ ಫೆಡರರ್ 2017ನೇ ಸಾಲಿನ "ಇಂಡಿಯನ್ ವೆಲ್ಸ್ ಎಟಿಪಿ ಟೆನಿಸ್' ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಫೈನಲ್ ಪಂದ್ಯದಲ್ಲಿ ಅವರು ತಮ್ಮದೇ ದೇಶದ ಸ್ಟ್ಯಾನಿಸ್ಲಾಸ್ ವಾವ್ರಿಂಕ ವಿರುದ್ಧ 6-4, 7-5 ಅಂತರದ ಜಯ ಸಾಧಿಸಿದರು. ಫೆಡರರ್ ಇಂಡಿಯನ್ ವೆಲ್ಸ್ ಪ್ರಶಸ್ತಿ ಗೆಲ್ಲುತ್ತಿರುವುದು ಇದು 5ನೇ ಸಲ. ಇದರೊಂದಿಗೆ ನೊವಾಕ್ ಜೊಕೋವಿಕ್ ಅವರ ಸರ್ವಾಧಿಕ ಗೆಲುವಿನ ದಾಖಲೆಯನ್ನು ಅವರು ಸರಿದೂಗಿಸಿದರು. ಇದಕ್ಕೂ ಮುನ್ನ ಫೆಡರರ್ 2004, 2005, 2006 ಹಾಗೂ 2012ರಲ್ಲಿ ಚಾಂಪಿಯನ್ ಆಗಿ ಮೂಡಿಬಂದಿದ್ದರು. 35ರ ಹರೆಯದ ರೋಜರ್ ಫೆಡರರ್ ಎಟಿಪಿ ಪ್ರಶಸ್ತಿ ಗೆದ್ದ ಅತೀ ಹಿರಿಯ ಟೆನಿಸಿಗನೆಂಬ ಹೆಗ್ಗಳಿಕೆಗೂ ಪಾತ್ರರಾದರು.

105. "2017 ಅಂತಾರಾಷ್ಟ್ರೀಯ ಅರಣ್ಯ ದಿನ (International Day of Forest)" ಧ್ಯೇಯವಾಕ್ಯ ______?

ಅ) ಫಾರೆಸ್ಟ್ & ಎನರ್ಜಿ
ಆ) ಫಾರೆಸ್ಟ್ & ಫ್ಯೂಲ್
ಇ) ಫಾರೆಸ್ಟ್ ಫಾರ್ ಟೂಮಾರೊ
ಈ) ಫಾರೆಸ್ಟ್ ಫಾರ್ ಬೆಟರ್ ವರ್ಲ್ಡ್

ಫಾರೆಸ್ಟ್ & ಎನರ್ಜಿ
ಅಂತಾರಾಷ್ಟ್ರೀಯ ಅರಣ್ಯ ದಿನವನ್ನು ಪ್ರತಿವರ್ಷ ಮಾರ್ಚ್ 21 ರಂದು ಆಚರಿಸಲಾಗುತ್ತದೆ. ಪ್ರಸ್ತುತ ಹಾಗೂ ಭವಿಷ್ಯದ ಪೀಳಿಗೆಗೆ ಅರಣ್ಯದ ಮಹತ್ವವನ್ನು ಸಾರುವುದು ಈ ದಿನದ ಉದ್ದೇಶ. ಈ ವರ್ಷದ ಧ್ಯೇಯವಾಕ್ಯ "ಫಾರೆಸ್ಟ್ & ಎನರ್ಜಿ (Forest and Energy)".



www.karunaduexams.com

106. ಭಾರತದಲ್ಲಿ ನಡೆದ 2017 ನೇ ಸಾಲಿನ ವಿಜಯ್ ಹಜಾರೆ ಕ್ರಿಕೆಟ್ ಟ್ರೋಫಿಯನ್ನು ಗೆದ್ದ ತಂಡ ಯಾವುದು?

ಅ) ಕರ್ನಾಟಕ

ಆ) ಮುಂಬೈ

ಇ) ತಮಿಳುನಾಡು

ಈ) ರೈಲ್ವೇಸ್

ತಮಿಳುನಾಡು

ತಮಿಳುನಾಡು ತಂಡ 2017ನೇ ಸಾಲಿನ ವಿಜಯ್ ಹರಾರೆ ಕ್ರಿಕೆಟ್ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು. ಫೈನಲ್ ಪಂದ್ಯದಲ್ಲಿ ಪಶ್ಚಿಮ ಬಂಗಾಳ ತಂಡವನ್ನು 37 ರನ್ ಗಳಿಂದ ಸೋಲಿಸಿ ಪ್ರಶಸ್ತಿಯನ್ನು ಗೆದ್ದುಕೊಂಡಿತು.

107. "ವಿಶ್ವ ಸಂತೋಷ ಸೂಚ್ಯಂಕ (ವರ್ಲ್ಡ್ ಹ್ಯಾಪಿನೆಸ್ ಇಂಡೆಕ್ಸ್ 2017" ರಲ್ಲಿ ಭಾರತ ಯಾವ ಶ್ರೇಣಿಯಲ್ಲಿದೆ?

ಅ) 118 ನೇ ಶ್ರೇಯಾಂಕ

ಆ) 122 ನೇ ಶ್ರೇಯಾಂಕ

ಇ) 140 ನೇ ಶ್ರೇಯಾಂಕ

ಈ) 151 ನೇ ಶ್ರೇಯಾಂಕ

122 ನೇ ಶ್ರೇಯಾಂಕ

ವಿಶ್ವ ಸಂಸ್ಥೆ ಪ್ರಕಟಿತ "ವಿಶ್ವ ಸಂತೋಷ ಸೂಚ್ಯಂಕ 2017" ಪಟ್ಟಿಯಲ್ಲಿ ಒಟ್ಟು 155 ದೇಶಗಳ ಪೈಕಿ ಭಾರತ 122 ನೇ ಸ್ಥಾನದಲ್ಲಿ. ನಾರ್ವೆ ಅಗ್ರ ಶ್ರೇಯಾಂಕ ಹೊಂದಿದ್ದು ಡೆನ್ಮಾರ್ಕ್, ಐಸ್ ಲ್ಯಾಂಡ್, ಸ್ವಿಟ್ಜರ್ ಲ್ಯಾಂಡ್ ಮತ್ತು ಫಿನ್ ಲ್ಯಾಂಡ್ ನಂತರದ ಸ್ಥಾನಗಳಲ್ಲಿವೆ. ದೇಶದ ನಾಗರಿಕನ ಜಿಡಿಪಿ, ನಿರೀಕ್ಷಿತ ಜೀವಿತಾವಧಿ ಈ ಅಂಶಗಳನ್ನಾಧರಿಸಿ ಸಮೀಕ್ಷೆ ನಡೆಸಲಾಗಿದೆ.

108. 'ಬ್ಲೂಂಬರ್ಗ್ ಗ್ಲೋಬಲ್ ಹೆಲ್ತ್ ಇಂಡೆಕ್ಸ್-2017' ರ ಪಟ್ಟಿಯಲ್ಲಿ ಅಗ್ರ ಸ್ಥಾನ ಪಡೆದ ದೇಶ ಯಾವುದು?

ಅ) ನಾರ್ವೆ

ಆ) ಇಟಲಿ

ಇ) ಆಸ್ಟ್ರೇಲಿಯ

ಈ) ಸ್ವಿಟ್ಜರ್ ಲ್ಯಾಂಡ್

ಇಟಲಿ

ಇತ್ತೀಚೆಗೆ ಪ್ರಕಟಗೊಂಡ ಬ್ಲೂಂಬರ್ಗ್ ಜಾಗತಿಕ ಆರೋಗ್ಯ ಸೂಚ್ಯಂಕ-2017 ರಲ್ಲಿ ಇಟಲಿ ಅಗ್ರಸ್ಥಾನ ಪಡೆದುಕೊಂಡಿದೆ. ಅಧ್ಯಯನದ ಪ್ರಕಾರ ಇಟಲಿಯ ಸರಾಸರಿ ಜೀವಾತವಧಿ 80-89 ವರ್ಷಗಳು. ಐಸ್ ಲ್ಯಾಂಡ್ ಎರಡನೇ ಸ್ಥಾನ, ಸ್ವಿಟ್ಜಲ್ಯಾರ್ಂಡ್ ಮೂರನೇ ಸ್ಥಾನ ಹಾಗೂ ಸಿಂಗಪುರ ನಾಲ್ಕನೇ ಸ್ಥಾನ ಪಡೆದುಕೊಂಡಿವೆ.

www.karunaduexams.com

109. ಅಂತಾರಾಷ್ಟ್ರೀಯ ಸೌರ ಒಕ್ಕೂಟದ (ಇಂಟರ್ ನ್ಯಾಷನಲ್ ಸೋಲಾರ್ ಅಲಯನ್ಸ್) ಪೂರ್ಣಕಾಲಿಕ ಹಂಗಾಮಿ ಡೈರಕ್ಟರ್ ಜನರಲ್ ಆಗಿ ನೇಮಕಗೊಂಡವರು ಯಾರು?

ಅ) ಮುನೀಷ್ ಮೌದ್ಗೀಲ್

ಆ) ನವೀನ್ ಜೈನ್

ಇ) ಉಪೇಂದ್ರ ತ್ರಿಪಾಟಿ

ಈ) ಪ್ರಭಾವತಿ

ಉಪೇಂದ್ರ ತ್ರಿಪಾಟಿ

ಹಿರಿಯ ಐಎಎಸ್ ಅಧಿಕಾರಿ ಕರ್ನಾಟಕ ಸೇವೆಯ ಉಪೇಂದ್ರ ತ್ರಿಪಾಟಿಯವರು ಅಂತಾರಾಷ್ಟ್ರೀಯ ಸೌರ ಒಕ್ಕೂಟದ ಪೂರ್ಣಕಾಲಿಕ ಹಂಗಾಮಿ ಡೈರಕ್ಟರ್ ಜನರಲ್ ಆಗಿ ನೇಮಕಗೊಂಡಿದ್ದಾರೆ. ಅಂತಾರಾಷ್ಟ್ರೀಯ ಸೌರ ಒಕ್ಕೂಟದ ಕೇಂದ್ರ ಕಚೇರಿ ಗುರುಗಾಂವ್ ನ ಗ್ವಲಪಹರಿಯಲ್ಲಿರುವ ರಾಷ್ಟ್ರೀಯ ಸೌರ ಶಕ್ತಿ ಸಂಸ್ಥೆಯಲ್ಲಿದೆ.

110. ವಿಶ್ವ ಚಳಿಗಾಲದ ವಿಶೇಷ ಒಲಂಪಿಕ್ ಕ್ರೀಡಾಕೂಟ 2017 ನ್ನು ಯಾವ ದೇಶದಲ್ಲಿ ಆಯೋಜಿಸಲಾಗಿತ್ತು?

ಅ) ಫ್ರಾನ್ಸ್

ಆ) ಕೆನಡಾ

ಇ) ಲಕ್ಸಂಬರ್ಗ್

ಈ) ಆಸ್ಟ್ರಿಯ

ಆಸ್ಟ್ರಿಯ

ವಿಶ್ವ ಚಳಿಗಾಲದ ವಿಶೇಷ ಒಲಂಪಿಕ್ ಕ್ರೀಡಾಕೂಟ 2017 ಆಸ್ಟ್ರೀಯಾದಲ್ಲಿ ಮಾರ್ಚ್ 14 ರಿಂದ ಆರಂಭಗೊಂಡಿದ್ದು, ಮಾರ್ಚ್ 24ರವರೆಗೆ ನಡೆಯಲಿದೆ. 105 ದೇಶಗಳಿಂದ 2,600 ಕ್ರೀಡಾಪಟುಗಳು ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ.

111. ದುಬೈನಲ್ಲಿರುವ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ನ ನೂತನ ಮುಖ್ಯ ಲೆಕ್ಕಾಧಿಕಾರಿ ಯಾಗಿ ನೇಮಕಗೊಂಡವರು ಯಾರು?

ಅ) ಅಂಕುರ್ ಖನ್ನಾ

ಆ) ಸುಜಿತ್ ಕುಮಾರ್

ಇ) ರೇಖಾ ಭರದ್ವಾಜ್

ಈ) ವಿಶಾಲ್ ಕೃಷ್ಣ

ಅಂಕುರ್ ಖನ್ನಾ

www.karunaduexams.com

112. ಯಾವ ಜಿಲ್ಲೆಯನ್ನು "ಕಾರ್ಬನ್ ನ್ಯೂಟ್ರಲ್ (ಇಂಗಾಲ ಸ್ಥಿರ)' ಆದ ಭಾರತದ ಪ್ರಪ್ರಥಮ ಜಿಲ್ಲೆ ಎಂದು ಘೋಷಿಸಲಾಗಿದೆ?

ಅ) ವಿಶಾಕಪಟ್ಟಣ

ಆ) ನಳಂದ

ಇ) ಮಜುಲಿ

ಈ) ಟವಾಂಗ್

ಮಜುಲಿ

ಅಸ್ಸಾಂ ನ ಮಜುಲಿ ಜಿಲ್ಲೆಯನ್ನು ಭಾರತದ ಪ್ರಪ್ರಥಮ 'ಕಾರ್ಬನ್ ನ್ಯೂಟ್ರಲ್' ಜಿಲ್ಲೆಯನ್ನಾಗಿ ಮಾಡುವ ಅಭಿಯಾನವನ್ನು ಪ್ರಾರಂಭಿಸಿದೆ ಈ ಮೂಲಕ ಜೀವ ವೈವಿದ್ಯ ಉಳಿಸುವ ಕಾರ್ಯವನ್ನು ಪ್ರೋತ್ಸಾಹಿಸಲಿದೆ.

113. ಮಾನವ ಅಭಿವೃದ್ಧಿ ಸೂಚ್ಯಾಂಕ 2017 ರ ಪಟ್ಟಿಯಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) 121

ಆ) 131

ಇ) 145

ಈ) 152

131

ವಿಶ್ವಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮದಡಿ ಕೈಗೊಂಡ ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ಒಟ್ಟು 188 ದೇಶಗಳ ಪಟ್ಟಿಯಲ್ಲಿ ಭಾರತ 131 ನೇ ಸ್ಥಾನದಲ್ಲಿದೆ. ಭಾರತವನ್ನು 'ಸಾಮಾನ್ಯ ಮಾನವಾಭಿವೃದ್ಧಿ' ವಲಯದಲ್ಲಿ ಗುರುತಿಸಲಾಗಿದ್ದು, ಈ ವಲಯದಲ್ಲಿ ಬಾಂಗ್ಲಾದೇಶ, ಭೂತಾನ್, ಪಾಕಿಸ್ತಾನ, ಕೀನ್ಯಾ, ಮ್ಯಾನ್ಮರ್ ಮತ್ತು ನೇಪಾಳ ದೇಶಗಳೂ ಸಹ ಇವೆ. ನಾರ್ವೆ ದೇಶ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿದ್ದು, ಆಸ್ಟ್ರೇಲಿಯ ಮತ್ತು ಸ್ವಿಟ್ಜರ್ಲ್ಯಾಂಡ್ ನಂತರದ ಸ್ಥಾನಗಳಲ್ಲಿವೆ.

114. 2017 ಜಾಗತಿಕ ಶಿಕ್ಷಕ ಪ್ರಶಸ್ತಿಯನ್ನು ಪಡೆದುಕೊಂಡಿರುವ "ಮ್ಯಾಗ್ಗಿ ಮ್ಯಾಕ್ ಡೊನೆಲ್ (Maggie MacDonnell)" ಯಾವ ದೇಶದವರು?

ಅ) ಜಪಾನ್

ಆ) ಕೆನಡಾ

ಇ) ಅಮೆರಿಕ

ಈ) ಫ್ರಾನ್ಸ್

ಕೆನಡಾ

ಕೆನಡಾದ ಮ್ಯಾಗ್ಗಿ ಮ್ಯಾಕ್ ಡೊನೆಲ್ ಅವರು 2017ನೇ ಸಾಲಿನ ಜಾಗತಿಕ ಶಿಕ್ಷಕ ಪ್ರಶಸ್ತಿ (Global Teacher Award)ಗೆ ಭಾಜನರಾಗಿದ್ದಾರೆ. ಕೆನಡಾ ಅರ್ಕಾಟಿಕ್ ನಲ್ಲಿರುವ ತನ್ನ ಗ್ರಾಮ ಸಲ್ಲೂಟ್ ನಲ್ಲಿ ವಿದ್ಯಾರ್ಥಿಗಳ ಜೀವನವನ್ನು ಬದಲಾಯಿಸಿದಕ್ಕಾಗಿ ಹಾಗೂ ಅತಿ ಹೆಚ್ಚು ಆತ್ಮಹತ್ಯೆಗೆ ಒಳಗಾಗುತ್ತಿದ್ದ ಈ

www.karunaduexams.com

ಹಳ್ಳಿಯಲ್ಲಿ ತನ್ನ ಸಮುದಾಯದವರನ್ನು ಮನ ಪರಿವರ್ತಿಸಿದಕ್ಕಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ. ಸಲ್ಲೂಟ್ ಗ್ರಾಮ ಹಿಮ ಮತ್ತು ಮಂಜಿನಿಂದ ಆವೃತ್ತವಾದ ವಿಶ್ವದ ದೂರ ಪ್ರದೇಶಗಳಲ್ಲಿ ಒಂದು.

115. ಈ ಕೆಳಗಿನ ಯಾವ ದಿನದಂದು "ವಿಶ್ವ ಕವನ ದಿನ (World Peotry Day)"ವನ್ನು ಆಚರಿಸಲಾಗುತ್ತದೆ?

ಅ) ಮಾರ್ಚ್ 21

ಆ) ಮಾರ್ಚ್ 22

ಇ) ಮಾರ್ಚ್ 23

ಈ) ಮಾರ್ಚ್ 24

ಮಾರ್ಚ್ 21

ವಿಶ್ವ ಕವನ ದಿನವನ್ನು ಪ್ರತಿ ವರ್ಷ ಮಾರ್ಚ್ 21ರಂದು ಆಚರಿಸಲಾಗುತ್ತದೆ.

116. ಈ ಕೆಳಗಿನ ಯಾರು ಕೇರಳ ಹೈಕೋರ್ಟಿನ ಮುಖ್ಯನ್ಯಾಯಮೂರ್ತಿಗಳಾಗಿ ನೇಮಕಗೊಂಡಿದ್ದಾರೆ?

ಅ) ನವನೀತಿ ಪ್ರಸಾದ್ ಸಿಂಗ್

ಆ) ಸುರೇಖಾ ಸಿಂಗ್

ಇ) ವಿಜಯ್ ನಾರಾಯಣ್

ಈ) ರಾಧಕೃಷ್ಣನ್

ನವನೀತಿ ಪ್ರಸಾದ್ ಸಿಂಗ್

ನ್ಯಾಯಮೂರ್ತಿ ನವನೀತಿ ಪ್ರಸಾದ್ ಸಿಂಗ್ ಅವರು ಕೇರಳ ಹೈಕೋರ್ಟಿನ ಮುಖ್ಯನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದಾರೆ. ಸಿಂಗ್ ಅವರು ಪಾಟ್ನ ಹೈಕೋರ್ಟಿನಲ್ಲಿ ಜಡ್ಜ್ ಆಗಿ ಸೇವೆ ಸಲ್ಲಿಸುತ್ತಿದ್ದರು.

117. "2017 ರ ಏಬಲ್ ಪ್ರಶಸ್ತಿ"ಯನ್ನು ಯಾರು ಮುಡಿಗೇರಿಸಿಕೊಂಡರು?

ಅ) ವೆಸ್ ಮೇಯರ್

ಆ) ಆ್ಯಂಡ್ರಿವ್ ಜೆ.ವೇಲ್ಸ್

ಇ) ಜಾನ್ ಎಫ್.ನಾಶ್

ಈ) ಲೂಯಿಸ್ ನಿರೆನ್ಬರ್ಗ್

ವೆಸ್ ಮೇಯರ್

ಫ್ರಾನ್ಸ್ ನ ಖ್ಯಾತ ಗಣಿತಶಾಸ್ತ್ರಜ್ಞ ವೆಸ್ ಮೇಯರ್ 2017 ರ ಪ್ರತಿಷ್ಠಿತ ಏಬಲ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಈ ಪ್ರಶಸ್ತಿಯನ್ನು ನಾರ್ವೆ ಅಕಾಡಮಿ ಆಫ್ ಸೈನ್ಸ್ ಅಂಡ್ ಲೆಟರ್ಸ್ ಪ್ರಾಯೋಜಿಸುತ್ತಿದ್ದು, ಗಣಿತ ಶಾಸ್ತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ.)

www.karnaduexams.com

118. ಭಾರತದ ಷೇರು ವಿನಿಮಯ ಮಂಡಳಿಯ ಪೂರ್ಣ ಕಾಲಿಕ ಸದಸ್ಯರಾಗಿ ಯಾರನ್ನು ನೇಮಿಸಲಾಗಿದೆ?

ಅ) ಎಸ್.ರಾಮನ್

ಆ) ಗುರುಮೂರ್ತಿ ಮಹಾಲಿಂಗಂ

ಇ) ಎಮ್ ಎಮ್ ಪಟೇಲ್

ಈ) ಮಾಧಬಿ ಪುರಿ ಬುಚ್

ಮಾಧಬಿ ಪುರಿ ಬುಚ್

119. ಮೆಕ್ಸಿಕೊದಲ್ಲಿ ನಡೆದ ಐಎಸ್ಎಸ್ಎಫ್ ವಿಶ್ವಕಪ್ ಡಬಲ್ ಟ್ರ್ಯಾಪ್ ವಿಭಾಗದಲ್ಲಿ ಚಿನ್ನ ಗೆದ್ದ ಭಾರತದ ಯುವ ಶೂಟರ್ ಯಾರು?

ಅ) ಅಂಕುರ್ ಮಿತ್ತಲ್

ಆ) ಮನ್ ಸಿಂಗ್

ಇ) ವೀರ್ ಸಿಂಗ್ ಭಾಜ್ವ

ಈ) ಅಮರಿಂದರ್ ಚೀಮ

ಅಂಕುರ್ ಮಿತ್ತಲ್

ಐಎಸ್ಎಸ್ಎಫ್ ವಿಶ್ವಕಪ್ ಡಬಲ್ ಟ್ರ್ಯಾಪ್ ವಿಭಾಗದಲ್ಲಿ ಭಾರತದ ಯುವ ಶೂಟರ್ ಅಂಕುರ್ ಮಿತ್ತಲ್ ಚೊಚ್ಚಲ ಬಾರಿಗೆ ಚಿನ್ನದ ಪದಕವನ್ನು ಗೆದ್ದುಕೊಂಡರು. ಎದುರಾಳಿ ಜೇಮ್ಸ್ ವಿಲೆಟ್ ರನ್ನು ಮಣಿಸಿದ 24 ವರ್ಷದ ಅಂಕುಲ್ ಮಿತ್ತಲ್ ಡಬಲ್ ಟ್ರ್ಯಾಪ್ ವಿಭಾಗದಲ್ಲಿ 75 ಅಂಕ ಗಳಿಸಿದ್ದರು. 21ರ ಹರೆಯದ ವಿಲೆಟ್ ಈ ಬಾರಿ 72 ಅಂಕ ಗಳಿಸಿ ಬೆಳ್ಳಿ ಪದಕ ಗಳಿಸಿದ್ದಾರೆ.

120. "ಇಂಡಿಯಾ ಸೋರ್ಸಿಂಗ್ ಫೇರ್ (India Sourcing Fair)-2017" ಯಾವ ದೇಶದಲ್ಲಿ ಆಯೋಜಿಸಲಾಗಿತ್ತು?

ಅ) ಶ್ರೀಲಂಕ

ಆ) ನೇಪಾಳ

ಇ) ಮಲೇಷಿಯ

ಈ) ಭಾರತ

ಶ್ರೀಲಂಕ

www.karunaduexams.com

121. ಕೇಂದ್ರ ಸರ್ಕಾರ ಪ್ರಾಯೋಜಿತ 'ರಾಷ್ಟ್ರೀಯ ವಯೋಶ್ರೀ ಯೋಜನೆ' ಯನ್ನು ಯಾವ ರಾಜ್ಯದಲ್ಲಿ ಉದ್ಘಾಟಿಸಲಾಯಿತು?

ಅ) ತಮಿಳುನಾಡು

ಆ) ಆಂಧ್ರಪ್ರದೇಶ

ಇ) ಮಹಾರಾಷ್ಟ್ರ

ಈ) ಮಧ್ಯಪ್ರದೇಶ

ಆಂಧ್ರಪ್ರದೇಶ

ದೇಶದ ಹಿರಿಯ ನಾಗರಿಕರಿಗೆ ವೈದ್ಯಕೀಯ ಸಾಧನ-ಸಲಕರಣೆಗಳ ಸಹಾಯ ನೀಡುವ ಕೇಂದ್ರ ಸರ್ಕಾರ ಪ್ರಾಯೋಜಿತ 'ರಾಷ್ಟ್ರೀಯ ವಯೋಶ್ರೀ ಯೋಜನೆ' ಯನ್ನು ಆಂಧ್ರಪ್ರದೇಶದಲ್ಲಿ ಉದ್ಘಾಟಿಸಲಾಯಿತು. ಈ ಯೋಜನೆ ಎಲ್ಲಾ ಬಿಪಿಎಲ್ ಕಾರ್ಡ್ ಹೊಂದಿರುವ ಹಿರಿಯ ನಾಗರಿಕರಿಗೆ ಅನ್ವಯವಾಗಲಿದೆ.

122. "2017 ಕುಲದೀಪ್ ನಾಯರ್ ಪತ್ರಿಕೋದ್ಯಮ ಪ್ರಶಸ್ತಿಯನ್ನು ಯಾರಿಗೆ ನೀಡಿ ಗೌರವಿಸಲಾಯಿತು?

ಅ) ರವೀಶ್ ಕುಮಾರ್

ಆ) ಅನುಪಮ್ ಮಿಶ್ರ

ಇ) ಕುಶಾಲ್ ಅರೋರ

ಈ) ರಿಜ್ವಾನ್ ಕೌಸರ್

ರವೀಶ್ ಕುಮಾರ್

NDTV ಇಂಡಿಯಾದ ಹಿರಿಯ ಕಾರ್ಯನಿರ್ವಾಹಕ ಸಂಪಾದಕ ರವೀಶ್ ಕುಮಾರ್ ಅವರಿಗೆ ಚೊಚ್ಚಲ ಕುಲದೀಪ್ ನಾಯರ್ ಪತ್ರಿಕೋದ್ಯಮ ಪ್ರಶಸ್ತಿಯನ್ನು ನೀಡಲಾಯಿತು. ಪತ್ರಿಕೋದ್ಯಮಕ್ಕೆ ರವೀಶ್ ಕುಮಾರ್ ನೀಡಿರುವ ಕೊಡುಗೆಯನ್ನು ಗಮನಿಸಿ ಪ್ರಶಸ್ತಿಯನ್ನು ನೀಡಲಾಯಿತು.

123. "2017 ಗ್ಲೋಬಲ್ ಎನರ್ಜಿ ಅರ್ಕಿಟೆಕ್ಚರ್ ಪರ್ಫಮನ್ಸ್ ಇಂಡೆಕ್ಸ್ (Global Energy Architecture Performance Index) ನಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) 64

ಆ) 87

ಇ) 98

ಈ) 105

87

"2017 ಗ್ಲೋಬಲ್ ಎನರ್ಜಿ ಅರ್ಕಿಟೆಕ್ಚರ್ ಪರ್ಫಮನ್ಸ್ ಇಂಡೆಕ್ಸ್ (Global Energy Architecture Performance Index) ನಲ್ಲಿ 127 ರಾಷ್ಟ್ರಗಳ ಪೈಕಿ ಭಾರತ 87ನೇ ಸ್ಥಾನದಲ್ಲಿದೆ. ಸ್ವಿಟ್ಜರ್ಲ್ಯಾಂಡ್ ಸೂಚ್ಯಂಕದಲ್ಲಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ. ನಂತರ ಸ್ಥಾನದಲ್ಲಿ ನಾರ್ವೆ, ಸ್ವೀಡನ್,

www.karunaduexams.com

ಡೆನ್ಮಾರ್ಕ್ ಮತ್ತು ಫ್ರಾನ್ಸ್ ರಾಷ್ಟ್ರಗಳಿವೆ. ವಿಶ್ವ ಆರ್ಥಿಕ ವೇದಿಕೆ ಈ ಸೂಚ್ಯಂಕವನ್ನು ಹೊರತರುತ್ತಿದೆ.

124. "ಕೇನ್ ವನ್ಯಜೀವಿ ಅಭಯಾರಣ್ಯ (Kane Wildlife Sanctuary)" ಯಾವ ರಾಜ್ಯದಲ್ಲಿದೆ?

ಅ) ಅಸ್ಸಾಂ

ಆ) ಅರುಣಾಚಲ ಪ್ರದೇಶ

ಇ) ಪಶ್ಚಿಮ ಬಂಗಾಳ

ಈ) ಮಹಾರಾಷ್ಟ್ರ

ಅರುಣಾಚಲ ಪ್ರದೇಶ

"ಕೇನ್ ವನ್ಯಜೀವಿ ಅಭಯಾರಣ್ಯ (Kane Wildlife Sanctuary)" ಅರುಣಾಚಲ ಪ್ರದೇಶದ ಪಶ್ಚಿಮ ಸಿಯಾಂಗ್ ಜಿಲ್ಲೆಯಲ್ಲಿದೆ.

125. ವಿಶ್ವ ಕ್ಷಯ ರೋಗ ದಿನವನ್ನು ಈ ಕೆಳಗಿನ ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಮಾರ್ಚ್ 22

ಆ) ಮಾರ್ಚ್ 23

ಇ) ಮಾರ್ಚ್ 24

ಈ) ಮಾರ್ಚ್ 25

ಮಾರ್ಚ್ 24

ಪ್ರತಿವರ್ಷ ಮಾರ್ಚ್ 24 ರಂದು ವಿಶ್ವ ಕ್ಷಯರೋಗ ದಿನವನ್ನು ಆಚರಿಸಲಾಗುತ್ತದೆ. ಕ್ಷಯರೋಗದ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ಜಾಗತಿಕ ಮಟ್ಟದಲ್ಲಿ ಕ್ಷಯರೋಗವನ್ನು ನಿರ್ಮೂಲನೆ ಮಾಡಲು ಕರೆ ನೀಡುವುದು ಈ ದಿನದ ಉದ್ದೇಶ. Unite To End TB ಇದು ಈ ವರ್ಷದ ಥೀಮ್.

126. 6ನೇ ರಾಷ್ಟ್ರೀಯ ಫೋಟೋಗ್ರಾಫಿ ಪ್ರಶಸ್ತಿ ಸಮಾರಂಭದಲ್ಲಿ ಜೀವಮಾನ ಸಾಧನೆ ಪ್ರಶಸ್ತಿಯನ್ನು ಯಾರಿಗೆ ನೀಡಲಾಯಿತು?

ಅ) ರಘು ರಾಯ್

ಆ) ಕೆ ಕೆ ಮುಸ್ತಫ

ಇ) ಅತುಲ್ ಚೌಬೆ

ಈ) ಉಲ್ಲಾಸ್ ಚಂದ್ರ

ರಘು ರಾಯ್

ಹಿರಿಯ ಛಾಯಾಚಿತ್ರಕಾರ ರಘು ರಾಯ್ ಅವರಿಗೆ 6ನೇ ರಾಷ್ಟ್ರೀಯ ಛಾಯಾಚಿತ್ರ ಪ್ರಶಸ್ತಿ ಸಮಾರಂಭದಲ್ಲಿ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಲಾಯಿತು. ಕೇಂದ್ರ ಮಾಹಿತಿ ಮತ್ತು ಪ್ರಸರಣ ಸಚಿವಾಲಯ ಈ ಪ್ರಶಸ್ತಿಯನ್ನು

www.karunaduexams.com

ನೀಡಲಾಗುತ್ತಿದ್ದು, ಛಾಯಾಚಿತ್ರ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

127. ಸೆಂಟ್ರಲ್ ಕೌನ್ಸಿಲ್ ಆಫ್ ಇಂಡಿಯನ್ ಮೆಡಿಸಿನ್ ಆಂಡ್ ಸೆಂಟ್ರಲ್ ಕೌನ್ಸಿಲ್ ಆಫ್ ಹೋಮಿಯೋಪಥಿ ಕಾರ್ಯಾಚರಣೆಯ ಮೇಲ್ವಿಚಾರಣೆ ನಡೆಸಲು ಯಾವ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ?

ಅ) ಅರುಣ್ ಜೇಟ್ಲಿ ಸಮಿತಿ

ಆ) ಮಧುಕರ್ ಗುಪ್ತಾ ಸಮಿತಿ

ಇ) ಶಶಿ ತರೂರ್ ಸಮಿತಿ

ಈ) ಅರವಿಂದ್ ಪನಗಾರಿಯ ಸಮಿತಿ

ಅರವಿಂದ್ ಪನಗಾರಿಯ ಸಮಿತಿ

128. ಶಿಕ್ಷಣ ಸಂಸ್ಥೆಗಳಲ್ಲಿ ಉಚಿತ ವೈ-ಫೈ ಸೇವೆ ಒದಗಿಸುವ ಯೋಜನೆಯನ್ನು ಈ ಕೆಳಕಂಡ ಯಾವ ರಾಜ್ಯದಲ್ಲಿ ಪ್ರಾರಂಭಿಸಲಾಗಿದೆ?

ಅ) ಕರ್ನಾಟಕ

ಆ) ಗುಜರಾತ್

ಇ) ಉತ್ತರಪ್ರದೇಶ

ಈ) ಬಿಹಾರ

ಬಿಹಾರ

ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಉಚಿತ ವೈ-ಫೈ ಸೇವೆ ಒದಗಿಸುವ ಮಹತ್ವಾಕಾಂಕ್ಷಿ ಯೋಜನೆಯನ್ನು 'ಬಿಹಾರ್ ದಿವಸ್' ಅಂಗವಾಗಿ ಬಿಹಾರ ರಾಜ್ಯದಲ್ಲಿ ಪ್ರಾರಂಭಿಸಿದೆ. ಬಿಹಾರ ರಾಜ್ಯವನ್ನು ಬಂಗಾಳ ರಾಜ್ಯದಿಂದ 1912 ರಲ್ಲಿ ಪ್ರತ್ಯೇಕಿಸಿದ ಸ್ಮರಣಾರ್ಥ ಮಾರ್ಚ್ 22 ರಂದು ಬಿಹಾರ್ ದಿವಸ್ ಆಚರಿಸಲಾಗುತ್ತದೆ.

129. ಆಲ್ ಇಂಡಿಯ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ (AIIMS) ದೆಹಲಿಯ ನೂತನ ನಿರ್ದೇಶಕರಾಗಿ ಆಯ್ಕೆಗೊಂಡವರು ಯಾರು?

ಅ) ಪ್ರತಾಪ್ ಸಿ.ರೆಡ್ಡಿ

ಆ) ರಣ್ ದೀಪ್ ಗಲೇರಿಯ

ಇ) ಎಂ.ಸಿ.ಮಿಶ್ರ

ಈ) ಕೆ.ಕೆ.ಶರ್ಮಾ

ರಣ್ ದೀಪ್ ಗಲೇರಿಯ

ರಣ್ ದೀಪ್ ಗಲೇರಿಯ ಅವರು ಆಲ್ ಇಂಡಿಯ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ (AIIMS)ನ ನೂತನ ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ. ಮುಂದಿನ ಐದು ವರ್ಷಗಳ ಕಾಲ ಅಥವಾ 65 ವರ್ಷ ತುಂಬುವ ವರೆಗೆ ಅವರು ಅಧಿಕಾರದಲ್ಲಿ ಇರಲಿದ್ದಾರೆ. ಗಲೇರಿಯಾ ಅವರು ಅಟಲ್ ಬಿಹಾರಿ ವಾಜಪೇಯಿ ಅವರಿಗೆ ವೈಯುಕ್ತಿಕ ವೈದ್ಯರು ಆಗಿ ಸೇವೆ ಸಲ್ಲಿಸಿದ್ದಾರೆ.

www.karunaduexams.com

130. ಸಿನಿಮಾ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯ ಸಲುವಾಗಿ "ಸಿಖ್ ರತ್ನ ಪ್ರಶಸ್ತಿ-2017" ಯಾರಿಗೆ ನೀಡಲಾಗಿದೆ?

ಅ) ಗುರಿಂದರ್ ಚಾಢ

ಆ) ಸುಖ್ಬೀರ್ ಸಿಂಗ್ ಸಂಧು

ಇ) ಗುರುನಾಥನ್ ಸಿಂಗ್

ಈ) ವೈ ಕೆ ಸಿಂಗ್

ಗುರಿಂದರ್ ಚಾಢ

ಭಾರತೀಯ ಮೂಲದ ಬ್ರಿಟಿಷ್ ಸಿನಿಮಾ ನಿರ್ದೇಶಕ ಗುರಿಂದರ್ ಚಾಢ ಅವರಿಗೆ "ಸಿಖ್ ರತ್ನ ಪ್ರಶಸ್ತಿ-2017" ನೀಡಿ ಗೌರವಿಸಲಾಗಿದೆ. "Bhaji on the Beach", "Bend It Like Beckham" and "Bride and Prejudice" ಗುರಿಂದರ್ ನಿರ್ದೇಶನದ ಕೆಲವು ಪ್ರಮುಖ ಚಿತ್ರಗಳು.

131. ಪ್ರತಿಷ್ಟಿತ 'ಕಲಾ ರತ್ನ ಪ್ರಶಸ್ತಿ' ಗೌರವಕ್ಕೆ ಪಾತ್ರವಾಗಿರುವ ಭಾರತೀಯ ಚಲನಚಿತ್ರ ನಟ ಯಾರು?

ಅ) ಅಕ್ಷಯ್ ಕುಮಾರ್

ಆ) ಮೋಹನ್ ಲಾಲ್

ಇ) ಅನುಪಮ್ ಖೇರ್

ಈ) ಜಾನಿ ಲಿವರ್

ಅನುಪಮ್ ಖೇರ್

ಹಿಂದಿ ಚಿತ್ರರಂಗದ ಹಿರಿಯ ನಟ ಅನುಪಮ್ ಖೇರ್ ಪ್ರತಿಷ್ಟಿತ 'ಕಲಾ ರತ್ನ ಪ್ರಶಸ್ತಿ' ಗೌರವಕ್ಕೆ ಪಾತ್ರರಾಗಿದ್ದು, ಉಪರಾಷ್ಟ್ರಪತಿ ಹಮೀದ್ ಅನ್ಸಾರಿಯವರಿಂದ ಪ್ರಶಸ್ತಿ ಪಡೆಯಲಿದ್ದಾರೆ. ಅನುಪಮ್ ಖೇರ್ ರವರು ಭಾರತೀಯ ಚಲನಚಿತ್ರ ಮತ್ತು ಕಲೆಗೆ ನೀಡಿರುವ ಸೇವೆಗಾಗಿ 2004 ರಲ್ಲಿ ಪದ್ಮಶ್ರೀ ಮತ್ತು 2016 ರಲ್ಲಿ ಪದ್ಮಭೂಷಣ ಪ್ರಶಸ್ತಿಗೆ ಭಾಜನರಾಗಿದ್ದರು. ಬಾಲಿವುಡ್ ಅಲ್ಲದೆ ಹಾಲಿವುಡ್ ಸಿನಿಮಾಗಳಲ್ಲಿಯೂ ಸಹ ತಮ್ಮ ನಟನಾ ಕೌಶಲ್ಯವನ್ನು ಮೆರೆದಿರುವುದು ವಿಶಿಷ್ಟ.

132. ಭಾರತದಲ್ಲಿ ಮೊದಲ ಬಾರಿಗೆ 'ವರ್ಟಿಕಲ್ ಗಾರ್ಡನ್' ಪರಿಕಲ್ಪನೆಯನ್ನು ಈ ಕೆಳಕಂಡ ಯಾವ ನಗರದಲ್ಲಿ ಸಾಕಾರಗೊಳಿಸಲಾಗಿದೆ?

ಅ) ದೆಹಲಿ

ಆ) ಬೆಂಗಳೂರು

ಇ) ಗುರ್ ಗಾವ್

ಈ) ಕೊಚ್ಚಿ

ಬೆಂಗಳೂರು

ವಾಯು ಮಾಲಿನ್ಯ ಮಟ್ಟವನ್ನು ನಿಯಂತ್ರಿಸುವ ಸಲುವಾಗಿ ಭಾರತದಲ್ಲಿ ಮೊಟ್ಟಮೊದಲ ಬಾರಿಗೆ 'ವರ್ಟಿಕಲ್ ಗಾರ್ಡನ್' ಪರಿಕಲ್ಪನೆಯನ್ನು

www.karunaduexams.com

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಮೇಲ್ಸೇತುವೆಯಲ್ಲಿ ಅಳವಡಿಸಲಾಗುತ್ತಿದೆ. ಈ ಉದ್ಯಾನ ಶಬ್ದ ಮಾಲಿನ್ಯವನ್ನೂ ಸಹ ಕಡಮೆಗೊಳಿಸಲಿದೆ. ಸರ್ಕಾರೇತರ ಸಂಸ್ಥೆ 'ಸೇ-ಟ್ರೀಸ್' ಈ ಕಾರ್ಯಕ್ರಮದ ಮುಖ್ಯ ರೂವಾರಿ. ಈ ಮೇಲ್ಸೇತುವೆಯ ಪಿಲ್ಲರ್ ಗಳಿಗೆ ಸಾವಯವ ಗಿಡ-ಬಳ್ಳಿಗಳನ್ನು ಪ್ರಾಕೃತಿಕವಾಗಿ ಬೆಳೆಯುವಂತೆ ಮಾಡಲಾಗುತ್ತದೆ. ಅಲ್ಲದೆ ಈ ಉದ್ಯಾನಕ್ಕೆ ಸ್ವಯಂ ಚಾಲಿತ ಹನಿ ನೀರಾವರಿ ವ್ಯವಸ್ಥೆಯನ್ನು ಸಹಾ ಮಾಡಲಾಗುತ್ತದೆ.

133. 'ವರ್ಲ್ಡ್ ಕಾನ್ಫರೆನ್ಸ್ ಆನ್ ಎನ್ವಿರಾನ್ಮೆಂಟ್'ನ 3ನೇ ಆವೃತ್ತಿ ಯಾವ ದೇಶದಲ್ಲಿ ಆಯೋಜನೆಗೊಂಡಿತ್ತು?

ಅ) ಭಾರತ

ಆ) ಚೀನಾ

ಇ) ಫ್ರಾನ್ಸ್

ಈ) ಫಿಲಿಫೈನ್ಸ್

ಭಾರತ

ಮೂರನೇ ಪರಿಸರ ಕುರಿತಾದ ಸಮ್ಮೇಳನ ಭಾರತದ ರಾಜಧಾನಿ ನವದೆಹಲಿಯಲ್ಲಿ ಮಾರ್ಚ್ 25 ರಂದು ಆರಂಭಗೊಂಡಿತು. ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಈ ಸಮ್ಮೇಳನವನ್ನು ಆಯೋಜಿಸಿದ್ದು, ರಾಷ್ಟ್ರಪತಿ ಪ್ರಣಭ್ ಮುಖರ್ಜಿ ಅವರು ಚಾಲನೆ ನೀಡಿದರು.

134. "ವಿಶ್ವ ಗುಬ್ಬಿ ದಿನಾಚರಣೆ" ಯನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಮಾರ್ಚ್ 18

ಆ) ಮಾರ್ಚ್ 20

ಇ) ಮಾರ್ಚ್ 23

ಈ) ಮಾರ್ಚ್ 28

ಮಾರ್ಚ್ 20

"ವಿಶ್ವ ಗುಬ್ಬಿ ದಿನಾಚರಣೆ" ಯನ್ನು ಪ್ರತಿವರ್ಷ ಮಾರ್ಚ್ 20 ರಂದು ಆಚರಿಸಲಾಗುತ್ತಿದೆ. ನಗರವಾಸಿಯಾದ ಗುಬ್ಬಚ್ಚಿಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದರ ಜೊತೆಗೆ ನಗರ ಮಾಲಿನ್ಯದಿಂದ ಪಕ್ಷಿ ಸಂಕುಲಕ್ಕೆ ಉಂಟಾಗಿರುವ ತೀವ್ರ ಸಂಕಷ್ಟದ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಮೀಸಲಿಡಲಾಗಿದೆ.

135. ಈ ಕೆಳಗಿನ ಯಾವ ದೇಶ "2017 ವಿಶ್ವ ಪರಿಸರ ಶಿಕ್ಷಣ ಕಾಂಗ್ರೆಸ್" ಆಯೋಜಿಸಲಿದೆ?

ಅ) ಭಾರತ

ಆ) ರಷ್ಯಾ

ಇ) ಕೆನಡಾ

ಈ) ಸ್ಪೇನ್

ಕೆನಡಾ
9ನೇ ವಿಶ್ವ ಪರಿಸರ ಶಿಕ್ಷಣ ಕಾಂಗ್ರೆಸ್-2017 ಕೆನಡಾದಲ್ಲಿ ಸೆಪ್ಟೆಂಬರ್ 9-15 ರವರೆಗೆ ನಡೆಯಲಿದೆ.

136. ಸಮುದ್ರದ ಮಾರ್ಗದ ಮೂಲಕ ವರ್ಲಿ ಕೊಲಿವಾಡ ದಿಂದ ದಿ ಗೇಟ್ ವೇ ಆಫ್ ಇಂಡಿಯಾ ವರೆಗೂ ಯಶಸ್ವಿಯಾಗಿ ಸಮುದ್ರಯಾನ ಮಾಡಿದ ಪ್ರಪ್ರಥಮ ಭಾರತೀಯ ಮಹಿಳೆ ಯಾರು?
ಅ) ಗೌರಿ ಸಿಂಗ್
ಆ) ನಿಖಿತ ಭರದ್ವಾಜ್
ಇ) ರೇಖಾ ನಿಗಮ್
ಈ) ದೀಪಿಕಾ ಕುಮಾರಿ
ಗೌರಿ ಸಿಂಗ್
ರಾಜಸ್ಥಾನದ 14 ವರ್ಷದ ಗೌರಿ ಸಿಂಗ್ ಸಮುದ್ರದ ಮಾರ್ಗದ ಮೂಲಕ ವರ್ಲಿ ಕೊಲಿವಾಡ ದಿಂದ ದಿ ಗೇಟ್ ವೇ ಆಫ್ ಇಂಡಿಯಾ ವರೆಗೂ ಯಶಸ್ವಿಯಾಗಿ ಸಮುದ್ರಯಾನ ಮಾಡಿದ ಪ್ರಪ್ರಥಮ ಭಾರತೀಯ ಮಹಿಳೆ ಎಂಬ ಗೌರವಕ್ಕೆ ಪಾತ್ರವಾಗಿದ್ದಾರೆ. 36 ಕಿ.ಮೀ ಉದ್ದದ ಜಲ ಮಾರ್ಗವನ್ನು ಸುಮಾರು 6 ಗಂಟೆ 30 ನಿಮಿಷದಲ್ಲಿ ಪೂರ್ಣಗೊಳಿಸಿದರು.

137. ಮಾನವ ದೇಹದ ಕೆಳಗಿನ ಯಾವ ಅಂಗ/ಅಂಗಾಂಶ ಸೀಸ ಸೇವನೆಗೆ ಹೆಚ್ಚು ಸಂವೇಧನ ಶೀಲವಾಗಿರುತ್ತದೆ?
ಅ) ಬ್ರೈನ್
ಆ) ಕಿಡ್ನಿ
ಇ) ಜಠರ
ಈ) ಸಣ್ಣ ಕರಳು
ಬ್ರೈನ್
ಸೀಸದ ವಿಷಕ್ಕೆ ಮಿದುಳು ಅತಿ ಹೆಚ್ಚು ಸಂವೇದನಾಶೀಲವಾದ ಮಾನವನ ಅಂಗ/ಅಂಗಾಂಶವಾಗಿದೆ.

138. ಸಂತೋಷ್ ಟ್ರೋಫಿ ಫುಟ್ ಬಾಲ್ ಟೂರ್ನಮೆಂಟ್-2017 ನ್ನು ಗೆದ್ದುಕೊಂಡ ಫುಟ್ ಬಾಲ್ ತಂಡ ಯಾವುದು?
ಅ) ಗೋವಾ
ಆ) ರೈಲ್ವೇಸ್
ಇ) ತಮಿಳುನಾಡು
ಈ) ಪಶ್ಚಿಮ ಬಂಗಾಳ
ಪಶ್ಚಿಮ ಬಂಗಾಳ

139. ಭಾರತೀಯ ವಿಜ್ಞಾನ ಕಾಂಗ್ರೆಸ್ -2018, 105 ನೇ ಆವೃತ್ತಿಯನ್ನು ಯಾವ ನಗರದಲ್ಲಿ ಆಯೋಜಿಸಲಾಗುತ್ತಿದೆ?

ಅ) ದೆಹಲಿ

ಆ) ಬೆಂಗಳೂರು

ಇ) ಚೆನ್ನೈ

ಈ) ಹೈದರಾಬಾದ್

140. ಗಡಿ ಭದ್ರತಾ ಪಡೆಯ (BSF) ಪ್ರಥಮ ಮಹಿಳಾ ಫೀಲ್ಡ್ ಆಫೀಸರ್ ಯಾರು?

ಅ) ಅಂಜಲಿ ಗುಪ್ತ

ಆ) ತನುಶ್ರೀ ಪರೀಕ್

ಇ) ಪ್ರಿಯಾ ಜಯರಾಂ

ಈ) ಸಂಧ್ಯಾ ಚೌಹಾನ್

ತನುಶ್ರೀ ಪರೀಕ್

ಗಡಿ ಭದ್ರತಾ ಪಡೆಯ 51 ವರ್ಷಗಳ ಇತಿಹಾಸದಲ್ಲಿ ತನುಶ್ರೀ ಪರೀಕ್ ಮೊದಲ ಮಹಿಳಾ ಯುದ್ಧ ಅಧಿಕಾರಿಯಾಗಿ ಸೇರ್ಪಡೆಗೊಂಡರು. ಮಧ್ಯ ಪ್ರದೇಶದ ಗ್ವಾಲಿಯರ್ ನ ಟೆಕನ್ಪುರ್ ಗಡಿ ಭದ್ರತಾ ಪಡೆ ಶಿಬಿರದಲ್ಲಿ ಇಂದು ನಡೆದ ಮೆರವಣಿಗೆಯ ಪರಾಮರ್ಶೆಯನ್ನು ಕೇಂದ್ರ ಗೃಹ ಸಚಿವ ರಾಜನಾಥ್ ಸಿಂಗ್ ನಡೆಸಿದರು. ಈ ಸಂದರ್ಭದಲ್ಲಿ 67 ಮಂದಿ ತರಬೇತಿ ಅಧಿಕಾರಿಗಳ ಮೆರವಣಿಗೆಯ ಮುಂದಾಳತ್ವವನ್ನು ತನುಶ್ರೀ ಪರೀಕ್ ವಹಿಸಿದ್ದರು. ರಾಜಸ್ತಾನದ ಬಿಕನೇರ್ ನ ನಿವಾಸಿಯಾಗಿರುವ ಪರೀಕ್ ಅಧಿಕಾರಿ ಶ್ರೇಣಿಯಲ್ಲಿ ಗಡಿ ಭದ್ರತಾ ಪಡೆಯ ಮಹಿಳಾ ಅಧಿಕಾರಿಯಾಗಿ ಸೇರ್ಪಡೆಗೊಂಡಿದ್ದು, 2014ರಲ್ಲಿ ಯುಪಿಎಸ್ಸಿ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದರು.

141. 'ನ್ಯಾಷನಲ್ ಸೆಂಟರ್ ಫಾರ್ ಅಂಟಾರ್ಟಿಕ್ ಅಂಡ್ ಓಷನ್ ರಿಷರ್ಚ್ (NCAOR)' ನ ಮುಖ್ಯ ಕಚೇರಿ ಎಲ್ಲಿದೆ?

ಅ) ಮಿನಿಕಾಯ್

ಆ) ಆ್ಯಂಡ್ರಾಟ್

ಇ) ಕವರಟ್ಟಿ

ಈ) ವಾಸ್ಕೋಡಗಾಮ

ವಾಸ್ಕೋಡಗಾಮ

'ನ್ಯಾಷನಲ್ ಸೆಂಟರ್ ಫಾರ್ ಅಂಟಾರ್ಟಿಕ್ ಅಂಡ್ ಓಷನ್ ರಿಷರ್ಚ್ (NCAOR)' ನ ಮುಖ್ಯ ಕಚೇರಿ ಗೋವಾದ ವಾಸ್ಕೋಡಗಾಮದಲ್ಲಿದೆ. ಧ್ರುವ ಪ್ರದೇಶದಲ್ಲಿ ಮತ್ತು ದಕ್ಷಿಣ ಸಮುದ್ರ ಪ್ರದೇಶದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯದಲ್ಲಿ ಮುಖ್ಯ ಭೂಮಿಕೆ ವಹಿಸುತ್ತಿದೆ.

www.karunaduexams.com

142. “ವಿಶ್ವ ರಂಗಭೂಮಿ ದಿನ (World Theatre Day)”ವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಮಾರ್ಚ್ 23

ಆ) ಮಾರ್ಚ್ 25

ಇ) ಮಾರ್ಚ್ 27

ಈ) ಮಾರ್ಚ್ 29

ಮಾರ್ಚ್ 27

ವಿಶ್ವ ರಂಗಭೂಮಿ ದಿನವನ್ನು ಪ್ರತಿ ವರ್ಷ ಮಾರ್ಚ್ 27 ರಂದು ಆಚರಿಸಲಾಗುತ್ತದೆ. ಅಂತಾರಾಷ್ಟ್ರೀಯ ರಂಗಭೂಮಿ ಸಂಸ್ಥೆ 1961 ರಲ್ಲಿ ಈ ದಿನಕ್ಕೆ ಚಾಲನೆ ನೀಡಿತು.

143. ಸ್ವಸಹಾಯ ಸಂಘಗಳ ಮೂಲಕ ಬ್ಯಾಂಕ್ ರಹಿತ ಪ್ರದೇಶಗಳಲ್ಲಿ ಬ್ಯಾಂಕಿಂಗ್ ಸೇವೆಗಳ ವಿಸ್ತರಣೆ ಮತ್ತು ಆರ್ಥಿಕ ಸೇರ್ಪಡೆ ಕಾರ್ಯಕ್ರಮವನ್ನು ಪ್ರಾರಂಭಿಸಿದ ಭಾರತದ ಪ್ರಥಮ ರಾಜ್ಯ ಯಾವುದು?

ಅ) ಕರ್ನಾಟಕ

ಆ) ಪಶ್ಚಿಮ ಬಂಗಾಳ

ಇ) ಒಡಿಶಾ

ಈ) ಕೇರಳ

ಒಡಿಶಾ

ಸ್ವಸಹಾಯ ಸಂಘಗಳ ಮೂಲಕ ಬ್ಯಾಂಕ್ ರಹಿತ ಪ್ರದೇಶಗಳಲ್ಲಿ ಬ್ಯಾಂಕಿಂಗ್ ಸೇವೆಗಳ ವಿಸ್ತರಣೆ ಮತ್ತು ಆರ್ಥಿಕ ಸೇರ್ಪಡೆ ಕಾರ್ಯಕ್ರಮವನ್ನು ಒಡಿಶಾ ರಾಜ್ಯ ಪ್ರಾರಂಭಿಸಿದೆ. ಭಾರತೀಯ ಸ್ಟೇಟ್ ಬ್ಯಾಂಕ್ ಸಹಯೋಗದೊಂದಿಗೆ ರಾಜ್ಯ ಸರ್ಕಾರ ಈ ಕಾರ್ಯಕ್ರಮವನ್ನು ಜಾರಿಗೊಳಿಸುತ್ತಿದೆ. ಮೊದಲ ಹಂತದಲ್ಲಿ ಬ್ಯಾಂಕಿಂಗ್ ಸೇವೆ ಹೊಂದಿರದ ಸುಮಾರು 1000 ಅತೀ ಹಿಂದುಳಿದ ಗ್ರಾಮಗಳಲ್ಲಿ ಸೇವೆಯನ್ನು ಪ್ರಾರಂಭಿಸಲಿದೆ.

144. ಕೇಂದ್ರಿಕೃತ ಪಾವತಿ ವ್ಯವಸ್ಥೆ ಆಧಾರಿತ ಮೊಬೈಲ್ ಪಾವತಿ ಸೇವೆಯಾದ “ಟ್ರೂ ಕಾಲರ್ ಪೇ” ಯನ್ನು ಟ್ರೂ ಕಾಲರ್ ಯಾವ ಬ್ಯಾಂಕಿನ ಸಹಭಾಗಿತ್ವದಡಿ ಪ್ರಾರಂಭಿಸಿದೆ?

ಅ) ಐಸಿಐಸಿಐ ಬ್ಯಾಂಕ್

ಆ) ಹೆಚ್.ಡಿ.ಎಫ್.ಸಿ. ಬ್ಯಾಂಕ್

ಇ) ಆಕ್ಸಿಸ್ ಬ್ಯಾಂಕ್

ಈ) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ

ಐಸಿಐಸಿಐ ಬ್ಯಾಂಕ್

ಕೇಂದ್ರಿಕೃತ ಪಾವತಿ ವ್ಯವಸ್ಥೆ ಆಧಾರಿತ ಮೊಬೈಲ್ ಪಾವತಿ ಸೇವೆಯಾದ “ಟ್ರೂ ಕಾಲರ್ ಪೇ” ಯನ್ನು ಟ್ರೂ ಕಾಲರ್ ಐಸಿಐಸಿಐ ಬ್ಯಾಂಕಿನ ಸಹಭಾಗಿತ್ವದಡಿ ಪ್ರಾರಂಭಿಸಿದೆ. ಟ್ರೂ ಕಾಲರ್ ಗ್ರಾಹಕರು ಈ ಆ್ಯಪ್ ನಲ್ಲಿ ವಿಶಿಷ್ಟ ವರ್ಚುಯಲ್

www.karunaduexams.com

ಪೇಮೆಂಟ್ ಅಡ್ರೆಸ್ ನ್ನು ನೋಂದಾಯಿಸಿ ಮೊಬೈಲ್ ಮೂಲಕ ಹಣ ಪಾವತಿ ಮತ್ತು ಸ್ವೀಕೃತಿ ಸೇವೆಗಳನ್ನು ಪಡೆಯಬಹುದಾಗಿದೆ.

145. ಸೆಂಟರ್ ಫಾರ್ ಏಷ್ಯಾ ಫೆಸಿಫಿಕ್ ಏವಿಯೇಷನ್ (CAPA) ಇತ್ತೀಚಿನ ವರದಿ ಪ್ರಕಾರ ದೇಶಿಯ ಪ್ರಯಾಣಿಕರ ದಟ್ಟಣೆಯ ವಿಭಾಗದಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) ಒಂದು

ಆ) ಮೂರು

ಇ) ಐದು

ಈ) ಆರು

ಮೂರು

ಸಿಡ್ನಿ ಮೂಲದ ವಿಮಾನಯಾನ ಚಿಂತಕರ ಚಾವಡಿ "ಸೆಂಟರ್ ಫಾರ್ ಏಷ್ಯಾ ಫೆಸಿಫಿಕ್ ಏವಿಯೇಷನ್ (CAPA)" ಇತ್ತೀಚಿನ ವರದಿಯ ಪ್ರಕಾರ ದೇಶಿಯ ಪ್ರಯಾಣಿಕರ ದಟ್ಟಣೆಯ ವಿಭಾಗದಲ್ಲಿ ಮೂರನೇ ಸ್ಥಾನದಲ್ಲಿದೆ. 2016 ರಲ್ಲಿ ಭಾರತದ ದೇಶಿಯ ವಿಮಾನ ಪ್ರಯಾಣಿಕರ ಸಂಖ್ಯೆ 100 ಮಿಲಿಯನ್ ರಷ್ಟಿದ್ದು, ಜಪಾನ್ (97 ಮಿಲಿಯನ್)ನನ್ನು ಹಿಂದಿಕ್ಕಿದೆ. ಅಮೆರಿಕ ಮೊದಲ ಸ್ಥಾನದಲ್ಲಿದ್ದಾರೆ, ಚೀನಾ ಎರಡನೇ ಸ್ಥಾನದಲ್ಲಿದ್ದು, ನಂತರದ ಸ್ಥಾನದಲ್ಲಿ ಭಾರತ ಇದೆ.

146. 2017 ಫಾರ್ಮೂಲಾ 1 ರೊಲೆಕ್ಸ್ ಆಸ್ಟ್ರೇಲಿಯಾ ಗ್ರಾಂಡ್ ಪ್ರಿಕ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡವರು _______?

ಅ) ಸೆಬಾಸ್ಟಿಯನ್ ವೆಟ್ಟಲ್

ಆ) ಲೂಯಿಸ್ ಹ್ಯಾಮಿಲ್ಟನ್

ಇ) ವಾಲ್ಟೆರಿ ಬೊಟ್ಟಸ್

ಈ) ನಿಕೊ ರೋಸ್ಬರ್ಗ್

ಸೆಬಾಸ್ಟಿಯನ್ ವೆಟ್ಟಲ್

147. ಈ ಕೆಳಗಿನ ಯಾರು "ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿ (Animal Welfare Board of India)ಯ ನೂತನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ?

ಅ) ಶರದ್ ಸಿಂಗ್ ನೇಗಿ

ಆ) ಅಮಿತ್ ಮಿಶ್ರಾ

ಇ) ಜ್ಯೋತಿಸಿಂಗ್ ರಾಥೋಡ್

ಈ) ಕಲ್ಯಾಣ್ ಕುಮಾರ್

ಶರದ್ ಸಿಂಗ್ ನೇಗಿ

ಹಿರಿಯ ಐಎಫ್ಎಸ್ ಅಧಿಕಾರಿ ಶರದ್ ಸಿಂಗ್ ನೇಗಿ ಅವರು "ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿ"ಯ ನೂತನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.



www.karunaduexams.com

"ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿ"ಯು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿರುವ ಸಂವಿಧಾನಿಕ ಸಂಸ್ಥೆಯಾಗಿದ್ದು, ಇದರ ಕೇಂದ್ರ ಕಚೇರಿ ಚೆನ್ನೈನಲ್ಲಿದೆ.

148. "ಕಿನ್ನೆರಸನಿ ವನ್ಯಜೀವಿ ಅಭಯಾರಣ್ಯ (Kinnerasani Wildlife Sanctuary)" ಯಾವ ರಾಜ್ಯದಲ್ಲಿದೆ?

ಅ) ಒಡಿಶಾ

ಆ) ತೆಲಂಗಣ

ಇ) ಮಹಾರಾಷ್ಟ್ರ

ಈ) ಗೋವಾ

ಕಿನ್ನರಸನಿ ವನ್ಯಜೀವಿ ಅಭಯಾರಣ್ಯ ತೆಲಂಗಣ ರಾಜ್ಯದ ಖಮ್ಮಮ್ ಜಿಲ್ಲೆಯಲ್ಲಿದೆ.

149. "ಅತ್ಯುತ್ತಮ ಸಣ್ಣ ಬ್ಯಾಂಕ್' 2016 ಪ್ರಶಸ್ತಿಯನ್ನು ಪಡೆದ ಭಾರತೀಯ ಬ್ಯಾಂಕ್ ಯಾವುದು?

ಅ) ಲಕ್ಷ್ಮೀ ವಿಲಾಸ್ ಬ್ಯಾಂಕ್

ಆ) ಯೆಎಸ್ ಬ್ಯಾಂಕ್

ಇ) ಕರೂರು ವೈಶ್ಯ ಬ್ಯಾಂಕ್

ಈ) ದೆನಾ ಬ್ಯಾಂಕ್

ಕರೂರು ವೈಶ್ಯ ಬ್ಯಾಂಕ್

150. 2016 ನೇ ಸಾಲಿನ 'ಸರ್ ಗ್ಯಾರೀಫೀಲ್ಡ್ ಸೋಬರ್ಸ್ ಟ್ರೋಫಿ' ಪ್ರಶಸ್ತಿ ಯನ್ನು ಪಡೆದ ಭಾರತೀಯ ಕ್ರಿಕೆಟ್ ಆಟಗಾರ ಯಾರು?

ಅ) ವಿರಾಟ್ ಕೊಹ್ಲಿ

ಆ) ಮಹೇಂದ್ರ ಸಿಂಗ್ ಧೋನಿ

ಇ) ಅಜಿಂಕ್ಯಾ ರಹಾನೆ

ಈ) ರವಿಚಂದ್ರನ್ ಅಶ್ವಿನ್

ರವಿಚಂದ್ರನ್ ಅಶ್ವಿನ್

ಐಸಿಸಿ ವರ್ಷದ ಕ್ರಿಕೆಟ್ ಆಟಗಾರ ಮತ್ತು ವರ್ಷದ ಟೆಸ್ಟ್ ಕ್ರಿಕೆಟ್ ಆಟಗಾರನಿಗೆ ನೀಡುವ 'ಸರ್ ಗ್ಯಾರೀಫೀಲ್ಡ್ ಸೋಬರ್ಸ್ ಟ್ರೋಫಿ' ಪ್ರಶಸ್ತಿಯನ್ನು 2016 ನೇ ಸಾಲಿಗೆ ರವಿಚಂದ್ರನ್ ಅಶ್ವಿನ್ ಗೆ ನೀಡಲಾಯಿತು. ಈ ಮೂಲಕ ರಾಹುಲ್ ದ್ರಾವಿಡ್ ಮತ್ತು ಸಚಿನ್ ತೆಂಡೂಲ್ಕರ್ ನಂತರ ಸರ್ ಗ್ಯಾರೀಫೀಲ್ಡ್ ಸೋಬರ್ಸ್ ಟ್ರೋಫಿ ಪ್ರಶಸ್ತಿಯನ್ನು ಪಡೆದ ಭಾರತದ 3ನೇ ಕ್ರಿಕೆಟ್ ಆಟಗಾರ ಎಂಬ ಖ್ಯಾತಿಗೆ ಪಾತ್ರರಾದರು.

www.karnaduexams.com

151. ವಿಶ್ವಸಂಸ್ಥೆಯ ವಿಶ್ವ ಆಹಾರ ಕಾರ್ಯಕ್ರಮ (WFP)ದ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಡೇವಿಡ್ ಬಿಯಾಸ್ಲೆ

ಆ) ಜೇಮ್ಸ್ ಸ್ಮಿತ್

ಇ) ಡೇವಿಡ್ ಬೆತ್ಲೆಮ್

ಈ) ನಿಕ್ಕಿ ಹ್ಯಾಲೆ

ಡೇವಿಡ್ ಬಿಯಾಸ್ಲೆ

ಸೌತ್ ಕ್ಯಾಲಿಫೋರ್ನಿಯಾದ ಮಾಜಿ ಗವರ್ನರ್ ಡೇವಿಡ್ ಬಿಯಾಸ್ಲೆ ಅವರು ವಿಶ್ವಸಂಸ್ಥೆಯ ವಿಶ್ವ ಆಹಾರ ಕಾರ್ಯಕ್ರಮದ ನೂತನ ಕಾರ್ಯನಿರ್ವಾಹಕ ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ. WFP ವಿಶ್ವದ ಅತಿ ದೊಡ್ಡ ಮಾನವೀಯ ಸಂಘಟನೆಯಾಗಿದ್ದು, ಪ್ರತಿವರ್ಷ 75 ದೇಶಗಳಲ್ಲಿ 80 ದಶಲಕ್ಷ ಜನರಿಗೆ ಆಹಾರ ಸಹಾಯ ಒದಗಿಸುತ್ತಿದೆ. ಇದರ ಕೇಂದ್ರ ಕಚೇರಿ ಇಟಲಿಯ ರೋಮ್ ನಲ್ಲಿದೆ.

152. ಕೇಂದ್ರ ಮಾಹಿತಿ ಮತ್ತು ಪ್ರಸರಣ ಸಚಿವಾಲಯವು ಆನ್ ಲೈನ್ ಮುಖಾಂತರ ಸಿನಿಮಾ ಪ್ರಮಾಣಪತ್ರವನ್ನು ನೀಡುವ ಸಲುವಾಗಿ ಪ್ರಾರಂಭಿಸಿದ ವ್ಯವಸ್ಥೆ ಯಾವುದು?

ಅ) ಇ-ಸಿನಿಪ್ರಮಾಣ್

ಆ) ಇ-ಸೆನ್ಸಾರ್

ಇ) ಇ-ಸಿನಿಮಾ

ಈ) ಇ-ಪ್ರಮಾಣ್

ಇ-ಸಿನಿಪ್ರಮಾಣ್

ಚಲನಚಿತ್ರ ಉದ್ಯಮದಲ್ಲಿ ಪಾರದರ್ಶಕತೆ ಮತ್ತು ಸುಲಲಿತಗೊಳಿಸುವ ಉದ್ದೇಶದಿಂದ ಕೇಂದ್ರ ಮಾಹಿತಿ ಮತ್ತು ಪ್ರಸರಣ ಸಚಿವಾಲಯವು ಆನ್ ಲೈನ್ ಮುಖಾಂತರ ಸಿನಿಮಾ ಪ್ರಮಾಣಪತ್ರವನ್ನು ನೀಡುವ ಸಲುವಾಗಿ ಇ-ಸಿನಿಪ್ರಮಾಣ್ ಎಂಬ ಆನ್ ಲೈನ್ ಪೋರ್ಟಲ್ ಅನ್ನು ಪ್ರಾರಂಭಿಸಿದೆ.

153. ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾದ ನೂತನ ಸದಸ್ಯರಾಗಿ ಯಾರನ್ನು ನೇಮಕ ಮಾಡಲಾಗಿದೆ?

ಅ) ಸಾನಿಯಾ ಮಿರ್ಜಾ

ಆ) ಸಿದ್ಧಾರ್ಥ ಉಪಾಧ್ಯಾಯ

ಇ) ಗೋಪಿಚಂದ್

ಈ) ವಿಜೆಯೇಂದ್ರ ಸಿಂಗ್

ಸಿದ್ಧಾರ್ಥ ಉಪಾಧ್ಯಾಯ

154. ಅಟ್ಲಾಂಟಿಕ್ ಕೌನ್ಸಿಲ್ನ ಅಂತರರಾಷ್ಟ್ರೀಯ ಸಲಹಾ ಮಂಡಳಿಗೆ ಸೇರ್ಪಡೆಗೊಂಡ ಭಾರತೀಯ ವ್ಯಕ್ತಿ ಯಾರು?

ಅ) ಎ.ಆರ್.ರೆಹಮಾನ್

www.karunaduexams.com

ಆ) ಭರತ್ ಗೋಪಾಲಸ್ವಾಮಿ

ಇ) ಅನಿಲ್ ಅಂಬಾನಿ

ಈ) ಸಚಿನ್ ತಂಡೂಲ್ಕರ್

ಅನಿಲ್ ಅಂಬಾನಿ

ರಿಲಾಯನ್ಸ್ ಸಮೂಹ ಸಂಸ್ಥೆಯ ಅಧ್ಯಕ್ಷರಾದ ಅನಿಲ್ ಅಂಬಾನಿ ಅವರು ಅಟ್ಲಾಂಟಿಕ್ ಕೌನ್ಸಿಲ್ನ ಅಂತರರಾಷ್ಟ್ರೀಯ ಸಲಹಾ ಮಂಡಳಿಗೆ ಸದಸ್ಯರಾಗಿ ಸೇರ್ಪಡೆಗೊಂಡಿದ್ದಾರೆ. ಅಟ್ಲಾಂಟಿಕ್ ಕೌನ್ಸಿಲ್ ನ ಕೇಂದ್ರ ಕಚೇರಿ ವಾಷಿಂಗ್ಟನ್ ಡಿ.ಸಿ ನಲ್ಲಿದೆ.

155. ಅಡ್ವರ್ಟೈಸಿಂಗ್ ಸ್ಟ್ಯಾಂಡರ್ಡ್ ಕೌನ್ಸಿಲ್ ಆಫ್ ಇಂಡಿಯಾದೊಂದಿಗೆ ಸದಸ್ಯತ್ವ ಹೊಂದಿದ ಭಾರತದ ಪ್ರಥಮ ಇ-ಕಾಮರ್ಸ್ ಕಂಪನಿ ಯಾವುದು?

ಅ) ಫ್ರೀಚಾರ್ಜ್

ಆ) ಅಮೆಜಾನ್

ಇ) ಕ್ಲಿಯರ್ ಟ್ರಿಪ್

ಈ) ಪೇಟಿಯಂ

ಪೇಟಿಯಂ

**156.** ಕ್ರೆಡಿಟ್ ಕಾರ್ಡ್ ಬಳಕೆ ಪ್ರೋತ್ಸಾಹಿಸುವ ಉದ್ದೇಶದಿಂದ 'ಉನ್ನತಿ' ಎಂಬ ಕ್ರೆಡಿಟ್ ಕಾರ್ಡ್ ಪ್ರಾರಂಭಿಸಿದ ಬ್ಯಾಂಕ್ ಯಾವುದು?

ಅ) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

ಆ) ಬ್ಯಾಂಕ್ ಆಫ್ ಬರೋಡ

ಇ) ಪಂಜಾಬ್ ನ್ಯಾಷನಲ್ ಬ್ಯಾಂಕ್

ಈ) ಹೆಚ್.ಡಿ.ಎಫ್.ಸಿ.ಬ್ಯಾಂಕ್

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

ಕ್ರೆಡಿಟ್ ಕಾರ್ಡ್ ಬಳಕೆ ಪ್ರೋತ್ಸಾಹಿಸುವ ಉದ್ದೇಶದಿಂದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಉನ್ನತಿ ಹೆಸರಿನ ಕ್ರೆಡಿಟ್ ಕಾರ್ಡ್ ಪರಿಚಯಿಸಿದೆ. ಕೇಂದ್ರ ಸಚಿವ ಪಿಯುಷ್ ಗೋಯೆಲ್ ಅವರು ನವದೆಹಲಿಯಲ್ಲಿ ಕಾರ್ಡ್ ಬಿಡುಗಡೆಗೊಳಿಸಿದರು. "ಉನ್ನತಿ" ಕ್ರೆಡಿಟ್ ಕಾರ್ಡ್ ಎಲ್ಲಾ ಎಸ್.ಬಿ.ಐ ಶಾಖೆಯಲ್ಲಿ ಲಭ್ಯವಿರಲಿದೆ. ಮೊದಲ ನಾಲ್ಕು ವರ್ಷ ಯಾವುದೇ ವಾರ್ಷಿಕ ಶುಲ್ಕವನ್ನು ಕಾರ್ಡ್ ಮೇಲೆ ವಿಧಿಸುವುದಿಲ್ಲ.

157. ಏಷ್ಯಾ ಹಾಕಿ ಫೆಡರೇಷನ್ ನ "2016 ಏಷ್ಯಾ ವರ್ಷದ ಹಾಕಿ ಆಟಗಾರ" ಪ್ರಶಸ್ತಿ ಯಾರಿಗೆ ಲಭಿಸಿದೆ?

ಅ) ದಿಲೀಪ್ ಟರ್ಕಿ

ಆ) ಎಸ್ ವಿ ಸುನೀಲ್

ಇ) ಹರ್ಮನ್ ಪ್ರೀತ್ ಸಿಂಗ್

www.karunaduexams.com

ಈ) ಶ್ರೀಜೇಶ್

ಎಸ್ ವಿ ಸುನೀಲ್

ಕರ್ನಾಟಕದ ಎಸ್ ವಿ ಸುನೀಲ್ ಅವರಿಗೆ ಏಷ್ಯಾ ಹಾಕಿ ಫೆಡರೇಷನ್ ನ ಸೀನಿಯರ್ ಪುರುಷರ ವಿಭಾಗದಲ್ಲಿ "2016 ಏಷ್ಯಾ ವರ್ಷದ ಹಾಕಿ ಆಟಗಾರ" ಪ್ರಶಸ್ತಿ ಲಭಿಸಿದೆ. ಜೂನಿಯರ್ ವಿಭಾಗದಲ್ಲಿ ಹರ್ಮನ್ ಪ್ರೀತ್ ಸಿಂಗ್ ಅವರಿಗೆ 2016 ಭರವಸೆಯ ವರ್ಷದ ಆಟಗಾರ ಪ್ರಶಸ್ತಿ ಲಭಿಸಿದೆ.

158. ರಾಷ್ಟ್ರವ್ಯಾಪ್ತಿ ಗಣಿಗಾರಿಕೆ ಮೇಲೆ ನಿಷೇಧ ಹೇರಿದ ವಿಶ್ವದ ಮೊದಲ ರಾಷ್ಟ್ರ ಯಾವುದು?

ಅ) ಎಲ್ ಸಲ್ವಡಾರ್

ಆ) ಅಂಗೋಲ

ಇ) ಮೊರಾಕೊ

ಈ) ಸೂಡನ್

ಎಲ್ ಸಲ್ವಡಾರ್

ಸೆಂಟ್ರಲ್ ಅಮೆರಿಕದ ಪುಟ್ಟ ರಾಷ್ಟ್ರ ಎಲ್ ಸಲ್ವಡಾರ್ ರಾಷ್ಟ್ರವ್ಯಾಪ್ತಿ ಗಣಿಗಾರಿಕೆ ಮೇಲೆ ನಿಷೇಧ ಹೇರಿದೆ.

159. ಪ್ರಕೃತಿಯನ್ನು ಆರಾಧಿಸುವ ಹಬ್ಬವಾದ 'ಸರ್ ಹುಲ್' ಎಂಬ ಹಬ್ಬವನ್ನು ಯಾವ ರಾಜ್ಯದಲ್ಲಿ ಪ್ರಾರಂಭಿಸಲಾಯಿತು?

ಅ) ಅಸ್ಸಾಂ

ಆ) ಜಾರ್ಖಂಡ್

ಇ) ಮಧ್ಯಪ್ರದೇಶ

ಈ) ಒಡಿಸ್ಸಾ

ಜಾರ್ಖಂಡ್

160. ಈ ಕೆಳಗಿನ ಯಾವ ಹುಲಿ ಸಂರಕ್ಷಣಾ ವಲಯ ಅಧಿಕೃತ ಲಾಂಛನ ಹೊಂದಿದ ದೇಶದ ಮೊದಲ ಹುಲಿ ಸಂರಕ್ಷಣಾ ತಾಣವೆನಿಸಿದೆ?

ಅ) ಕನ್ಹಾ ಹುಲಿ ಸಂರಕ್ಷಣಾ ತಾಣ

ಆ) ಸರಿಸ್ಕ ಹುಲಿ ಸಂರಕ್ಷಣಾ ತಾಣ

ಇ) ಕಾರ್ಬೆಟ್ ಹುಲಿ ಸಂರಕ್ಷಣಾ ತಾಣ

ಈ) ಸಂಜಯ್ ಹುಲಿ ಸಂರಕ್ಷಣಾ ತಾಣ

ಕನ್ಹಾ ಹುಲಿ ಸಂರಕ್ಷಣಾ ತಾಣ

ಮಧ್ಯ ಪ್ರದೇಶದ ಕನ್ಹಾ ಹುಲಿ ಸಂರಕ್ಷಣಾ ತಾಣ ಅಧಿಕೃತ ಲಾಂಛನ ಹೊಂದಿದ ದೇಶದ ಮೊದಲ ಹುಲಿ ಸಂರಕ್ಷಣಾ ತಾಣ ಎಂಬ ಗೌರವಕ್ಕೆ ಪಾತ್ರವಾಗಿದೆ. ಜೌಗು ಜಿಂಕೆಯನ್ನು ಅಧಿಕೃತ ಲಾಂಛನವಾಗಿ ಘೋಷಿಸಲಾಗಿದೆ. ಜೌಗು ಜಿಂಕೆ ಮಧ್ಯ ಪ್ರದೇಶದ ರಾಜ್ಯ ಪ್ರಾಣಿ ಕೂಡ ಆಗಿದೆ.

www.karunaduexams.com